"ಸನ್ಮಾನ ಗ್ರಂಥಾವಳಿ" ಸಂಖ್ಯೆ ೪.

ಶ್ರೀಃ

ಗಿರಿಮಲ್ಲಿಕಾರ್ಜುನಶತಕಂ



ಆವಿರ್ಭಾವಃ ಕಲಶಜಲಧಾವಧ್ವರೇ ವಾಪಿಯಸ್ಯಾ |
ಸ್ಥಾನಂ ಯಸ್ಯಾಸ್ಸರಸಿಜವನಂ ವಿಷ್ಣುವಕ್ಷಸ್ಥಲಂ ವಾ |
ಭೂಮಾಯಸ್ಯಾಭುವನಮಖಿಲಂ ದೇವಿ ದಿವ್ಯಂಪದಂ ವಾ |
ಸ್ತ್ರೀಕಪ್ರಜ್ಞೈರನವಧಿ ಗುಣಾಸ್ತೂಯಸೇ ಸಾಕಥಂ ತ್ವಾಮ್ ||

ನಂಜನಗೂಡು
"ಸತೀಹಿತೈಷಿಣಿ" ಮಾತೃಮಂದಿರದಲ್ಲಿ
ಪ್ರಕಟಿಸಲ್ಪಟ್ಟುದು

ಶಂಕರ ಕರ್ನಾಟಕ ಪುಸ್ತಕ ಭಾಂಡಾರ,
ಪ್ರಕಾಶಕರೂ, ಪುಸ್ತಕ ವ್ಯಾಪಾರಿಗಳು,
ಮಾಳಮಡ್ಡಿ ಧಾರವಾಡ.

ಕರ್ಣಾಟಕನಂದಿನಿ.

(ದ್ವಿತೀಯ ಸಂಪುಟ).

ಕರ್ಣಾಟಕನಂದಿನಿಯು ಚಂದಾದಾರರ ಮತ್ತು ಇತರ ಪ್ರೇ ಜನರ ಪ್ರೋತ್ಸಾಹಬಲದಿಂದ ದ್ವಿತೀಯವರ್ಷದಲ್ಲಿ ಆಕಾರ-ಪುಟಸ ಚ್ಚಾಗಿ ಬೆಳೆಸಿರುವುದು. ಎಂದರೆ ಪ್ರಥಮವರ್ಷದಲ್ಲಿ ಕ್ರೌನ್ ಎಂಟರ ಪುಟಗಳಾಗಿ ಹೊರಡುತ್ತಿದ್ದುದು ದ್ವಿತೀಯವರ್ಷದಲ್ಲಿ ಕ್ರೌನ್ ನಾಲ್ಕ 32 ಪುಟಗಳಂತೆ ಹೊರಡುವಂತಾಯಿತು. ಈ ಎರಡನೆ ವರ್ಷದಲ್ಲಿ ಸ್ತ್ರೀ ವಶ್ಯಕವಾದ ಲೇಖನಗಳೂ ಉದಯರಾಗ, ಲಕ್ಷ್ಮೀಸುತಿ-ಗೀತೆಗಳ ಲೀಲಾಪರವಾದ ರಾಸಕ್ರೀಡಾ, ಜಲಕ್ರೀಡಾ ಮೊದಲಾದ ದೊಡ್ಡ ಹ ಕೃಷ್ಣಬಾಲಲೀಲಾ ಎಂಬ ಯಕ್ಷಗಾನಪ್ರಬಂಧವೂ, ಶ್ರೀ ರಾಮಮ ಲೇಖನಗಳೂ ಸಚಿತ್ರವಾಗಿ ಪ್ರಕಟವಾಗಿರುವುವು. ಮತ್ತು ಕನ್ನಡ ವನ್ನು ಕಲ್ಪಿಸಿ ಅದ್ವಿತೀಯ ದೇಶಭಕ್ತರೆನ್ನಿಸಿದ ದಿವಂಗತ, ವೆಂಕಟ ದಿವಂಗತ ಶ್ರೀನಿವಾಸರಾವ್-ಅಣ್ಣಾರಾವ್ ಸವದಿ, ಇವರ ಜೀವನಚ ತ್ರಾರ್ಹರಾದ ಭಾರತ ವೀರನಾರಿಯರ ಚರಿತೆಗಳೂ ಪ್ರಕಟಗೊಂಡಿರುವ ದಯಾನಂದ ಸರಸ್ವತಿಯವರ ಸಚಿತ್ರ ಜೀವನಚರಿತ್ರೆಯೂ ಮಕ್ಕಳ ಪ್ರಬಂಧವೂ ಕಾಳಗೌಡ, ಪ್ರೇಮಪಾಶ-ಎಂಬ ರಸವತ್ತಾದ ಕವಿತೆಗ ಗಿವೆ. ಅಪೇಕ್ಷರು ತರಿಸಿಕೊಳ್ಳಬಹುದು. ಬೈಂಡಾದ ಪುಸ್ತಕಕ್ಕೆ 3- ಗದ ಸಂಚಿಕೆಗಳಿಗೆ 2-8-0. ದ್ರೌಪದೀ ವಸ್ತ್ರಾಪಹರಣವೆಂಬ ಯಕ್ಷ ಕವು ಉಚಿತ.

ಪ್ರಥಮ ಸಂಪುಟ.

ಕರ್ಣಾಟಕನಂದಿನಿಯ ಪ್ರಥಮ ಸಂಪುಟದ ಸ್ವಲ್ಪ ಪ್ರತಿಗಳ ಬೈಂಡಾಗಿ ವಿಕ್ರಯಕ್ಕೆ ಸಿದ್ಧವಾಗಿರುವುವು. ಕ್ರೌನ್ ಎಂಟರ ಆಕಾರದ ಗಳನ್ನೂ 18 ಭಾವಚಿತ್ರಗಳನ್ನೂ ಶ್ರೀಯುತ ಎಂ. ವೆಂಕಟಕೃಷ್ಣಯ್ಯ ಜೇ. ಎಸ್. ಚಕ್ರವರ್ತಿಯವರು, ಶ್ರೀ. ಎಂ. ಶಾಮರಾಯರು, ಶ್ರೀ. ಮಂತಗೌಡರು, ಶ್ರೀ. ಎಸ್. ಎಫ್. ನರಹರಯ್ಯನವರು, ಶ್ರೀ. ಹೆಚ್. ನ ಯರು ಮೊದಲಾದ ಕರ್ಣಾಟ ದೇಶಭಕ್ತರ ಜೀವನಚರಿತೆಗಳೂ ವಂಗಕ ಗಿರೀಂದ್ರಮೋಹಿನೀದೇವಿ, ಮಹಾರಾಣಿ ರುದ್ರಮ್ಮದೇವಿ, ಶ್ರೀ|| ಸೌ|| ಬಾ, ಶ್ರೀ|| ಸೌ|| ರಂಗಮ್ಮ ಮೊದಲಾದ ಮಹಿಳಾಮಣಿಯರ ಚರಿತೆ ವಾಗಿ ಪ್ರಕಟವಾಗಿವೆಯಲ್ಲದೆ ಸ್ತ್ರೀಯರಿಗೆ ಉಪಯುಕ್ತಗಳಾದ ಅನೇ ಮಗಳೂ ಉಪಯುಕ್ತ ಲೇಖನಗಳೂ ಬಂದಿರುವುವು. ಸುಮುಖೀವಿಜ ಭಜನ ಗ್ರಂಥವು ಉಚಿತ. ಬೈಂಡಾದ ಪುಸ್ತಕ (12 ಸಂಚಿಕೆಗೆ) ಕ 2-2-0. ಬೈಂಡಾಗದ 12 ಸಂಚಿಕೆಗೆ 1-12-0.

ವಿಳಾಸ:—ಕಾರ್ಯದರ್ಶಿ,

"ನಂದಿನಿ" ಮಾತೃಮಂದಿರಂ ಸ

|| श्रीः ||

GIRIMALLIKARJUNÂ SHATAKAM

(ಗಿರಿಮಲ್ಲಿಕಾರ್ಜುನ ಶತಕಂ)

BY

R. TATA, M.A., L.T.

Published at the
"Sati-Hitaishini" Matru Mandiram
Nanjangud

BY

The Editor

First Edition 500 Copies

Mysore
PRINTED AT THE CROWN ELECTRIC PRESS
1919

ಕ್ರಯ ೮ ಆಣೆ. *Price* |8 As.

SANMÂNA GRANTHÂVALI

Edited and Published

BY

Srimati Tirumalamba

at the Hitaishini Matru Mandiram

NANJANGUD

1919

ಶ್ರೀಃ

ವಿನಂತಿ.

ಸತೀಹಿತೈಷಿಣಿಯ ಶಾಖಾರೂಪವಾಗಿ "ಸನ್ಮಾನಗ್ರಂಥಾವಳಿ" ಯನ್ನು ಹೊರಡಿಸಿದುದರ ಉದ್ದೇಶವನ್ನು ಸನ್ಮಾನಗ್ರಂಥಾವಳಿಯ ಪ್ರಥಮ-ದ್ವಿತೀಯ ಪುಸ್ತಕಗಳಾದ ತಪತೀಕಲ್ಯಾಣ, ಪ್ರಜ್ಞಾಸ್ವಯಂವರಗಳ ಪ್ರಸ್ತಾವನೆಯಲ್ಲಿಯೇ ವ್ಯಕ್ತಪಡಿಸಿರುವುದರಿಂದ ಇಲ್ಲಿ ಮತ್ತೆ ಪ್ರಸ್ತಾಪಿಸಬೇಕಾಗಿಲ್ಲ. ಹಿಂದೆ ನಿವೇದಿಸಿದ್ದಂತೆ ಈ ಗ್ರಂಥಾವಳಿಯಲ್ಲಿ ೩-೪-೫ ನೆ ಪುಸ್ತಕಗಳಾಗಿ ವಿವೇಕೋದಯ, ಭಾಮಾಕಲ್ಯಾಣ, "ಭೀಮಪರಾಕ್ರಮವರ್ಣನ" ವೆಂಬ ಮೂರು ಗ್ರಂಥಗಳನ್ನೂ ಪ್ರಕಟಪಡಿಸಬೇಕಾಗಿದ್ದಿತು. ಆದರೆ ವಿವೇಕೋದಯ-ಭಾಮಾಕಲ್ಯಾಣಗಳನ್ನು ಈ ವರ್ಷ ತಡೆದಿದ್ದು ಮುಂದಿನ ವರ್ಷದಲ್ಲಿ ಪ್ರಕಟಿಸುವುದು ಉಚಿತವಾಗಿ ಕಂಡುಬಂದುದರಿಂದ ಅದನ್ನು ಪ್ರಕಟಿಸಲಾಗಲಿಲ್ಲ. ಗ್ರಂಥಾವಳಿಯ ೩ ನೆಯ ಪುಸ್ತಕವಾಗಿ "ಗುರುದತ್ತರಾಯನ ಚರಿತ್ರೆ" ಎಂಬ ಜೈನಧರ್ಮಪರವಾದ ನಾಟಕಪುಸ್ತಕವನ್ನು ಪ್ರಕಟಪಡಿಸಿದೆವು; ನಾಲ್ಕನೆಯದಾಗಿ ಶಿವಭಕ್ತಿಪ್ರಾಶಸ್ತ್ಯವನ್ನು ವರ್ಣಿಸುವ "ಗಿರಿಮಲ್ಲಿಕಾರ್ಜುನ ಶತಕ" ವೆಂಬ ಪದ್ಯಗ್ರಂಥವನ್ನು ಈಗ ಪ್ರಕಟಗೊಳಿಸಿರುವೆವು.

ಈ ಶತಕವು ಗುರುದತ್ತರಾಯನ ಚರಿತೆಯನ್ನು ರಚಿಸಿದ ಶ್ರೀಯುತ, ರಾಜಗೋಪಾಲ ತಾತಾಚಾರ್, ಎಂ. ಎ. ಎಲ್. ಟಿ. ಅವರಿಂದಲೇ ವಿರಚಿತವಾಯಿತು. ಇದು ರಚಿಸಲ್ಪಟ್ಟು ನಾಲ್ಕಾರು ವರ್ಷಗಳಾಗಿರಬಹುದು. ಇಷ್ಟುಕಾಲವೂ ಇದು ಬೇರೆ ಕಡೆ ಪ್ರಕಾಶಕ್ಕೆಂದು ಒಪ್ಪಿಸಲ್ಪಟ್ಟಿದ್ದು ಅನೇಕ ಅನಾನುಕೂಲತೆಗಳಿಂದ ಅಲ್ಲಿ ಪ್ರಕಟಿತವಾಗಲು ಅವಕಾಶವಾಗದೆ ಇದ್ದುದರಿಂದ ಸನ್ಮಾನಗ್ರಂಥಾವಳಿಯಲ್ಲಿ ಪ್ರಚುರಪಡಿಸಬೇಕೆಂದು ಗ್ರಂಥಕರ್ತರಾದ ಈ ನಮ್ಮ ಭ್ರಾತೃವರ್ಗೀಯರು-ಶ್ರೀ ತಾತಾರ್ಯರು ಕೋರಿದುದರಿಂದ, ಪಂಡಿತರೂ, ಕವಿಗಳೂ, ನಿಜವಾದ ಭಾಷಾಭಿಮಾನಿಗಳೂ ಆದ ಈ ನಮ್ಮ ದೇಶೀಯ ಭ್ರಾತೃಗಳ ವಾಕ್ಯವನ್ನು ಗೌರವಿಸಿ, ಅವರಿಂದ ವಿರಚಿತವಾದ ಈ ಗಿರಿಮಲ್ಲಿಕಾರ್ಜುನಶತಕವನ್ನೂ ಗುರುದತ್ತರಾಯನ ಚರಿತೆಯನ್ನೂ ಸನ್ಮಾನಗ್ರಂಥಾವಳಿಯಲ್ಲಿ ಪ್ರಕಟಿಸಲು ಸಮ್ಮತಿಸಿದೆವು. ಗಿರಿಮಲ್ಲಿಕಾರ್ಜುನಶತಕವು ಕ್ಲಿಷ್ಟವಾಗಿ ತೋರಿದುದರಿಂದ ಸ್ತ್ರೀ ಬಾಲರಾದಿ ಸರ್ವರಿಗೂ ಉಪಯೋಗಿಸುವಂತೆ ಟಿಪ್ಪಣಿಯನ್ನು ಬರೆಯಿಸಿ ಪ್ರಚುರಪಡಿಸಲು ವಿಳಂಬವಾದುದರಿಂದ ಗುರುದತ್ತರಾಯನ ಚರಿತೆಯನ್ನು ಮೊದಲು ಪ್ರಚುರಪಡಿಸಬೇಕಾಯಿತು. ಟಿಪ್ಪಣಿ ಸಹಿತವಾದ ಈ ಶತಕವು ವಿದ್ಯಾ

ರ್ಥಿಗಳಿಗೂ ಶೈವಮತಾಭಿಮಾನಿಗಳಾದ ಮಹಿಳಾಮಣಿಯರಿಗೂ ಇತರ ದೇಶಭಾಷಾ ವತ್ಸಲರಿಗೂ ಉಪಯೋಗಕರವಾಗಿ ಕಂಡುಬರಬಹುದೆಂದು ನಂಬಿ, ಈ ಗ್ರಂಥದ ಗುಣಾವಗುಣ ವಿಮರ್ಶನದ ಕಾರ್ಯವನ್ನು ಪಂಡಿತಂಮನ್ಯರಾದ ಗ್ರಂಥವಿಮರ್ಶಕರಿಗೆ ಒಪ್ಪಿಸಿ, ಅವರ ವಿಮರ್ಶರೂಪವಾದ ಹಿತಸೂಚನೆಗಳಿಂದ ನಮ್ಮ ಮುಂದಿನ ಪುಸ್ತಕಪ್ರಕಟನ ಕಾರ್ಯಕ್ಕೆ ವಿಶೇಷ ಸಹಾಯವಾಗುವುದೆಂಬ ನಿರೀಕ್ಷಣೆಯಿಂದ ಇಲ್ಲಿಗೆ ಈ ಲೇಖನವನ್ನು ನಿಲ್ಲಿಸುವೆವು.

ಇತಿ—ಹಿತೈಷಿಣಿ.

ಮುನ್ನುಡಿ.

ಈ ಗಿರಿಮಲ್ಲಿಕಾರ್ಜುನ ಶತಕದ ಪದ್ಯಗಳನ್ನು ಬರೆದು ಅನೇಕ ವರ್ಷಗಳಾದುವು. ಅನೇಕ ವಿಧವಾದ ತೊಂದರೆಗಳಿಂದ ಈವರೆಗೆ ಮುದ್ರಿಸುವುದಕ್ಕಾಗಲಿಲ್ಲ. ಕೆಲವು ಪದ್ಯಗಳಲ್ಲಿ ಶಿವಶರಣರ ಸ್ತುತಿಯಿರುವುದು, ಕೆಲವು ಪದ್ಯಗಳಲ್ಲಿ ದೇಶಕಾಲೋಚಿತವಾದ ಒಂದೆರಡು ಮಾತುಗಳನ್ನು ಬರೆದಿರುವೆನು. ಗುಣಗಳನ್ನು ಮಾತ್ರವೇ ಗ್ರಹಿಸಬಲ್ಲ ಕನ್ನಡಿಗರು ಇದರಲ್ಲಿ ಒಂದೆರಡು ಗುಣಗಳನ್ನು ಪ್ರಯತ್ನದಿಂದ ಕಾಣಬಹುದು. ದೋಷೈಕದೃಷ್ಟಿಯುಳ್ಳ ಪಂಡಿತರಿಗೆ ಗ್ರಂಥವು ಚಿಕ್ಕದಾದರೂ ಪೂರ್ವಪೀಠಿಕೆಯಲ್ಲಿಯೇ ಅವರ ಇಷ್ಟಾರ್ಥವು ಕೈಗೂಡುವುದಕ್ಕೆ ಬೇಕಾದಷ್ಟು ಸಾಧನಸಂಪತ್ತು ದೊರಕಬಹುದು. ಅಂಥವರು ತಮಗೆ ಬೇಕಾದ ಕಡೆಯಲ್ಲಿ ಮಾತ್ರವೇ ತಮ್ಮ ವಿಮರ್ಶೆಯನ್ನು ತಿಳಿಸದೆ ಕನ್ನಡ ಭಾಷಾಸೇವಕನಾದ ಈ ಅಲ್ಪಜ್ಞನಿಗೆ ಬರೆದು ತಿಳಿಸಿದರೆ ಕೃತಾರ್ಥನಾಗುವನು. ಟಿಪ್ಪಣಿಯಲ್ಲಿರುವ ವಿಷಯಗಳು ಪದ್ಯಗಳ ಅರ್ಥವಾಗುವುದಕ್ಕೆ ಸಾಕೆಂದು ಭಾವಿಸಿ ಗ್ರಂಥವಿಸ್ತಾರಕ್ಕೆ ಹಿಂದೆಗೆದು ಸಂಕ್ಷೇಪವಾಗಿ ಬರೆದಿರುವೆನು.

ಭಾಷಾಬಾಂಧವರೆಲ್ಲರೂ ತಮಗೆ ತೋರಿದಂತೆ ಹಿತಸೂಚನೆಗಳನ್ನು ಮಾಡಿದರೆ ಈ ನನ್ನ ಭಾಷಾಸೇವೆಗೆ ತಕ್ಕ ಫಲವನ್ನು ಪಡೆದಂತಾಗುವುದು.

|| ಶ್ರೀರಸ್ತು ||

ಗಿರಿಮಲ್ಲಿಕಾರ್ಜುನಶತಕಂ.

ಓವಿ ಹಿಮಾಂಶುವಿಂಗೆ ಕಳೆಯಂ ದಿನಪಂಗತಿ ತೇಜಮಂ ಪ್ರತಾ |
ಪಾವಳಿಯಂ ಕೃಶಾನುಗೆ ರಮಾಪತಿಗಿಂದಿರೆಯಂ ಸಮಸ್ತಲೋ |
ಕಾವನ ದೃಷ್ಟಿಯಿಂದೆ ದಯೆಗೆಯ್ದುವೊಲಿತ್ತೆಮಗಿಷ್ಟಸಿದ್ಧಿಯಂ |
ಶ್ರೀವರನಂಬಿಕಾಪತಿ ಕರಂ ಪೊರೆಗಾ ಗಿರಿಮಲ್ಲಿಕಾರ್ಜುನಂ || ೧ ||

ನತನಪ್ಪೆಂ ಕೃತಿಯಂ ಚಮತ್ಕೃತಿಯುಮರ್ಥಪ್ರೌಢಿಯುಂ ಕೂಡೆ ಪಾ |
ರ್ವತಿಗಂ ಭಾರತಿಗಂ ಕವೀಂದ್ರತತಿಗಂ ಪಂಪಾವಿರೂಪಾಕ್ಷನು |
ನ್ನತಿಯಂ ನಿನ್ನ ಗಣಂಗಳಂ ಪೊಗೞ್ದವರ್ಗೊಲ್ದಿತ್ತೆಯೆಂತಂತು ವಾ |
ಙ್ಮತಿಯಂ ಪಾಲಿಸು ತಾತ ವತ್ಸನೊಳಗಂ ಶ್ರೀಶೈಲಮಲ್ಲೇಶ್ವರಾ || ೨ ||

ಮಮತೆಯನೊಂದಿ ತಮ್ಮ ಗುಣಮಂ ಗುಡಿಗಟ್ಟಿಪೊಗೞ್ದು ತಾವೆ ಉ |
ತ್ತಮಕವಿಗಳ್ ಗಡೆಂದು ಕೃತಿಯುತ್ಕೃತಿಯೆಂದುಸಿರ್ದೆಯ್ದೆ ಪೆರ್ಮೆಯಿಂ |
ದಮೆ ಶಿವಕಾವ್ಯಮಂ ಶಿವಕವೀಶ್ವರರಂ ಶಿವಲಿಂಗಭಕ್ತರಂ |
ತಮಗೆಣೆಯಲ್ಲರೆಂದು ಪೞಿವರ್ ಕೆಲಬರ್ ಗಿರಿಮಲ್ಲಿಕಾರ್ಜುನಾ || ೩ ||

ಶಿವನಾಮಕ್ಕೆ ಸಮಾನಮುಂಟೆ ಹರಚಾರಿತ್ರಕ್ಕೆ ಸಾದೃಶ್ಯಮುಂ |
ಟೆ ವಿರೂಪಾಕ್ಷನ ಮೈಮೆಗುಂಟೆ ಸದೃಶಂ ಶೈವಾಗಮಕ್ಕುಂಟೆ ಪೋ |
ಲ್ಕೆ ವಲಂ ಶಂಕರಭಕ್ತಿಗುಂಟೆ ಉಪಮಾನಂ ಬೇಱೆವೇಱೆಂದು ಪೇ |
ೞ್ವೊವಜರ್ ಮಾೞ್ಪುಪದೇಶಮಂ ಕರುಣಿಸಾ ಶ್ರೀಶೈಲಮಲ್ಲೇಶ್ವರಾ || ೪ ||

ವಾಸ್ತವಪೂಜೆಯಂ ವಿವಿಧವಸ್ತುಗಳಿಂದಮೊಡರ್ಚಿ ದಿವ್ಯರೂ |
ಪಸ್ತವನಂ ಗುಣಸ್ತವನವೆಂಬಿವನೊಲ್ದು ನೆಗೞ್ಚಿ ನಿನ್ನನಾ |
ಮಸ್ತವನಕ್ಕೆ ನೋಂತ ಮನುಜಂಗರಿದಲ್ತು ಪರತ್ರೆಯೆಂದೊಡಿ |
ನ್ನಸ್ತಮಿಪ್ಪೈಹಿಕವ್ಯಸನಮೇಂ ಪಿರಿದೇ ಗಿರಿಮಲ್ಲಿಕಾರ್ಜುನಾ || ೫ ||

ಯಮನಂ ಬಾರಿಸಿ ಮೌನಿವರ್ಯಸುತನಂ ನೀನೋವಿದೈ ದಕ್ಷಯಾ |
ಗಮನೆಂತುಂ ದಿವಿಜವ್ರಜಂ ನೆರೆದೊಡಂ ಪಾೞ್ಗೆಯ್ದು ಬಾಯ್ಕೇಳೆ ಶಾಂ |
ತಮನಂ ನೀಂ ಕರುಣಾಕಟಾಕ್ಷದೆ ಬೞಿಕ್ಕಂ ಕಾದೆಯೆಂದಂದು ಪೊ |
ಲ್ಲಮೆಯಿಂ ನಿನ್ನೊಳಿದಿರ್ಚಿ ಬಾೞ್ವರೊಳರೇ ಶ್ರೀಶೈಲಮಲ್ಲೇಶ್ವರಾ || ೬ ||

ಓವದೆ ನಿನ್ನನಂದು ಮೊದಲೊಳ್ ಕಡೆದರ್ ಕಡಲಂ ಸುರಾಸುರರ್ |
ಪಾವಿನ ಕಣ್ಣಿಯಿಂದವೊಗೆದತ್ತು ವಿಷಂ ಬಿಸುಟೋಡೆ ಭೀತಿಯಿಂ |
ದಾ ವಿಬುಧಾಳಿಯಂ ಪೊರೆವ ಕೂರ್ಮೆಯಿನೀಂಟಿದೆಯಲ್ತೆ ನೀ |
ನಾ ವಿಷಮಂ ಪೆಱರ್ಗೆ ಹಿತಮಂ ನೆಱೆಯಲ್ ಗಿರಿಮಲ್ಲಿಕಾರ್ಜುನಾ || ೭ ||

ನೆಮಿತ ಸುರಾಳಿಗಿತ್ತೆ ಗಡ ಇಂಗಡಲಿಂದೊಗೆತಂದ ವಸ್ತುವೆ |
ಲ್ಲಮನಮರ್ದಂ ಸುರದ್ರುಮವನಾನೆಯನಶ್ವಮನಂದು ಸೋಮನಂ |
ಸಮುವೆಸರುಳ್ಳೊಡಾಂತೆ ಮುಡಿಯೊಳ್ ಪೆಱವರ್ಗೆನಿತೊಂದು ಚಾಗಮಿ |
ಲ್ಲಮುಮ ಮೃಡಂಗದೇಂ ದಯೆಯೊ ಎಂಬಿನೆಗಂ ಗಿರಿಮಲ್ಲಿಕಾರ್ಜುನಾ || ೮ ||

ಮಱೆತೊಡಮನ್ಯಚಿಂತೆಗೆ ಮನಂಬುಗಲೀಯದೆ ಜೂದವಾಡಿಯ |
ಟ್ಕಿಱಿನಭವಾಂಘ್ರಿಗೆತ್ತು ಗುರುಜಂಗಮಪಾದಸರೋಜಸೇವೆಗೆಂ |
ದುಱೆ ತಱಿಸಂದ ಮೂರ್ಖನಯಿನಾರರನೋವಿದ ದೇವ ನಿನ್ನನೆಂ |
ತಱಿವರೊ ಭಕ್ತಿಭಾವರಹಿತರ್ ಮಡೆಯರ್ ಗಿರಿಮಲ್ಲಿಕಾರ್ಜುನಾ || ೯ ||

ಶಿವನಿತ್ತಂತುಟೆ ಸಾಲ್ಗುಮೆಂದು ತಣಿದಿರ್ದಾತಂಗೆ ಸೌಭಾಗ್ಯಮಂ |
ತವದಂತಿತ್ತಪೆಯಾಸೆವಟ್ಟು ಪೆಱರೊಂದೈಶ್ವರ್ಯಮಂ ಕಂಡು ಕು |
ಗ್ಗುವ ಮೂರ್ಖಂಗೆ ನಿರಾಶೆಯಂ ಬರಿಸುವೈ ನಿನ್ನೀವ ಸಂಪತ್ತಿನಿಂ |
ದವೆ ಆನಂದವನೊಂದಿಸಿಂದೆ ಭರದಿಂ ಶ್ರೀಶೈಲಮಲ್ಲೇಶ್ವರಾ ||೧೦||

ವಾದಂ ಬೇಡ ವಿರೋಧಿಯೊಳ್ ಗುರುವಿನೊಳ್ ಮುತ್ತರ್ಕ್ಕಳೊಳ್ ರಾಯನೊಳ್
ಜೂದಂ ಬೇಡಗಡಾರೊಳಂ ಮುಳಿಸುಬೇಡೆಂದುಂ ವೃಥಾಲಾಪಕಾ |
ಹ್ಲಾದಂಗೊಳ್ಳದಿರಾಡಿತಪ್ಪದಿರು ನೀಡುಂ ಸಾಲದಿರ್ ನಾಡೆ ಹಿಂ |
ಸಾದಾನಂಗೆಯಲಾಗದೆಂಬರೊವಜರ್ ಶ್ರೀಶೈಲಮಲ್ಲೇಶ್ವರಾ ||೧೧||

ಯತಿಯವೊಲಂದು ಕಾವಿಯುಡೆಯುಟ್ಟು ಕಪಾಲವನಾಂತು ಕೈಯೊಳಾ |
ಯತಿ ಸಲೆ ಭಿಕ್ಷೆಭಿಕ್ಷೆ ಎನುತಂದಮರಾವತಿಯಲ್ಲಿ ಜೋಹದಿಂ |
ದತಿರಮಣೀಯಮಾಗಿ ನಡೆತಂದ ಬೆಡಂಗಿಗೆ ಸೋಲ್ತ ಚಿತ್ರಕಳಾ |
ರತಯತಿಗಳ್ಗೆ ಕೊಟ್ಟೆ ಸುಖಮಂ ದಯೆಗೆಯ್ ಗಿರಿಮಲ್ಲಿಕಾರ್ಜುನಾ ||೧೨||

ಓಡುವನೋಜನೇಕೆಯೊ ಪರಾಭವಮಾದುದೆ ಬಲ್ಲರಿಂದೆ ಕೊಂ |
ಡಾಡನದೇಕೆ ನಿನ್ನ ಚರಿತಾಮೃತಮಂ ಪರದಂಬೊಲಯ್ಯೊ ಈ |

ಡಾಡುವನಿರ್ದ್ದ ತನ್ನ ಸರಕಂ ಕಲಲಿರ್ದ್ದವರೆತ್ತಪೋದರೆಂ |
ದಾಡಲದೇಕೆ ಸಂಬಳಮೆ ಸಾಲದು ಕೇಳ್ ಗಿರಿಮಲ್ಲಿಕಾರ್ಜುನಾ ||೧೩||

ನಡೆನುಡಿಗಲ್ತೊಡಂ ಪಡೆದೊಡಂ ಪಱಿಗನ್ನಡಸಕ್ಕದಂಗಳಂ |
ಬಿಡದಱಿದಿರ್ದ್ದನೆಂಬ ಪೆಸರಂ ಪಲವುಂ ನಯನೀತಿಯುಳ್ಳೊಡಂ |
ಕಡೆಗೊಡೆಯಂಗೆ ಬಿಲ್ತ ತನುವಂ ಪೊರೆಯಲ್ ಪಣಮಿಲ್ಲವೆಂಬೆಯು |
ಪ್ಪೊಡೆ ಸಲೆ ಸಾಲ್ಗುಮಲ್ತೆ ಬಯಲುಂ ಬಱಿನುಂ ಗಿರಿಮಲ್ಲಿಕಾರ್ಜುನಾ ||೧೪||

ಮನುಜರ ಸಂಖ್ಯೆಯಂ ಪಲವು ವಿನ್ನಣದಿಂ ನಡೆ ನೋಡಿನೋಡಿ ಕೆ |
ಮ್ಮನೆ ಪಣಮುಳ್ಳರಿಂತಿನಿಬರಿನ್ನಿನಿಬರ್ ಕಲೆಗಲ್ತರೆಂದು ಪೇ |
ೞ್ವನ ಗಣಿದಕ್ಕೆ ಸಾವರಿನಿಬರ್ ದಿಟದಿಂದಿನಿಬರ್ಗೆಸಾವೆ ನೆ |
ಟ್ಟನೆ ನೆರವೆಂದು ಲೆಕ್ಕವಿಡರೇಕರಸರ್ ಗಿರಿಮಲ್ಲಿಕಾರ್ಜುನಾ ||೧೫||

ಶಿಕ್ಷೆಗೆ ತಕ್ಕವರ್ ಪಸುಳೆಯರ್ ಪಲರಿರ್ದ್ದೊಡಮಿಲ್ಲ ಶಿಕ್ಷಕರ್ |
ರಕ್ಷಣೆಗರ್ಹರಿರ್ದುಮವರೊರ್ವ್ವ ತಳಾಱರ ಬಂದಿಗೆಯ್ದುವರ್ |
ಭಿಕ್ಷೆಯೆ ತಮ್ಮ ವೃತ್ತಿಯೆನುತಿರ್ಪ್ಪವರಿಲ್ಲದ ನಾಡುಮುಂಟು ಭಾ |
ಳಾಕ್ಷಿಯನೊರ್ವ್ವ ಶಾಂತಮನದಿಂ ತೆಱೆ ನೀಂ ಗಿರಿಮಲ್ಲಿಕಾರ್ಜುನಾ ||೧೬||

ವಾರಕೆ ಕೂಲಿಗೆಯ್ದು ಬರ್ದುಕಲ್ ಬಡವಂ ಬಡವಂಗೆ ಬಿಜ್ಜೆಯಾ |
ಧಾರಮೆ ಸಾಲ್ಗುಮೆಂಬರೊಡಲಂ ಮನಮಂ ಪಱಿದೋಡುವೋಜನಿಂ |
ದಾರಯೆ ಲೇಸಲೇ ಕೆಲಸಿಗಂ ಗಡ ಬಯ್ಗಿನ ಬೇಗದೊಳ್ ಪಣಂ |
ದಾರನೆ ಕಲ್ಲನೇಕೆ ಒವಜಂ ಗಿವಜಂ ಗಿರಿಮಲ್ಲಿಕಾರ್ಜುನಾ ||೧೭||

ಯಮುನಾ ಬಿರ್ದ್ದೊಟದಲ್ಲೋಗಡಿಸಿದ ಪೆಣನೋ ಆರ್ಥಸಂಸ್ಕಾರದೊಳ್ ಜೀ |
ವಮೆ ಮತ್ತಂ ಬಂದುದೋ ಕ್ಷಾಮದ ನೆಲೆವನೆಯೋ ಭಿಕ್ಷೆಗಂ ಪೋಗದಿಂತಿ |
ರ್ಕ್ಕುವೆ ವೈರಾಗ್ಯಂ ಗಡೆಂಬಂತಿರೆ ತನುಮನಮಂ ಭಾಪು ಬೇರ್ಕೆಯ್ಯಲಿನ್ನ |
ಕ್ಕುಮೆನುತ್ತುಂ ತೋಱುವನ್ನಂ ಮುಡಿಪುಗುವೊವಜಂ ಶೈಲಮಲ್ಲೀಮಹೇಶಾ||೧೮||

ಓರನ್ನರ್ ಹರಿಯುಂ ಸರೋಜಭವನುಂ ನೀಮುಂ ದಲೆಂದಂದು ಘೀಂ |
ಕಾರಂಗೆಯ್ದುಪುವಲ್ತೆ ವಾದಿಘಟೆಗಳ್ ಸಂದೇಹದಿಂ ನೋೞ್ಕುವೋಂ |
ಕಾರಕ್ಕಂತ್ಯದೊಳಿರ್ಪ್ಪ ನಿಮ್ಮಯ ಮಕಾರಂ ಸಲ್ಲದನ್ಯರ್ಗೆನಲ್ |
ಬೀರರ್ ನಿಮ್ಮವೊಲಾರುಮಿಲ್ಲಜಗದೊಳ್ ಶ್ರೀಶೈಲಮಲ್ಲೇಶ್ವರಾ ||೧೯||

ನಱುಗಂಪಂ ಬೀಱುತಿರ್ಕ್ಕುಂ ಸುರತರುತತಿವೊಲ್ ಚಂದನಕ್ಷ್ಮಾಜಮೆತ್ತಂ |
ಮೆಱೆಗುಂ ಭಾವಂಗಳಂ ಕನ್ನಡಿಸುವ ನಡೆ ಸುಶ್ರಾವ್ಯಮೆಂಬನ್ನಮೊಂದ |
ಲ್ಕಿಱಿನಾಲ್ಗಿಂ ಮಾತು ಕರ್ಣಾಟಕವೆನಿಪುದಱಿಂ ಕಮ್ಮಿತಾದತ್ತುನಾಡಿಂ |
ತಱಿಸಿಂ ಕರ್ಪ್ಪಿಂತು ನಾಡಿಂಗೊಗೆದುದೊ ತಿಳಿಯೆಂ ಶೈಲಮಲ್ಲೀಮಹೇಶಾ ||೨೦||

ಮನಮಂ ಭಾಷೆಯ ಸೇವೆಯೊಳ್ ನಿಱಿಸಿ ಧಾರಾಪೂರ್ವಕಂ ದೇಹದಂ |
ಡನೆಯುಂ ಲೆಕ್ಕಿಸದಿರ್ದ್ದ ದೇಸಿಗನ ಜೋಹಂಗೊಂಡನಾ ವೀರಮಾ |
ಮುನಿಪಂ ದ್ರಾವಿಡದೇಶದಲ್ಲಿ ಮೆಱೆದಾ ಭಾಷಾಭಿಮಾನಕ್ಕೆ ವಂ |
ದನೆಯಂ ಗೆಯ್ಯದ ಪಂಡಿತರ್ಕ್ಕಳೊಳರೇ ಶ್ರೀಶೈಲಮಲ್ಲೇಶ್ವರಾ ||೨೧||

ಶಿಲೆಯುಂ ಬೋಧಿಕುಮೆಂಬ ಮಾತನೆ ದಿಟಂ ಮಾೞ್ಪೊಂದು ಸಾಮರ್ಥ್ಯದಿಂ |
ಪಲವುಂ ಶಾಸನದಿಂದೆ ತಾಂ ನೆಗೞ್ದ ಭಾಷಾದೇಶಚಾರಿತ್ರಕಾ |
ದೊಲವಿಂ ಮಾಡಿದ ಕೈಮೆಯುಂ ಪೊಗೞಲಾನೇನೇೞ್ದಪೆಂ ಕಲ್ಲುಮೀ |
ನೆಲನುಳ್ಳನ್ನೆವರಂ ಪೊಗೞ್ವುದವರಂ ಶ್ರೀಶೈಲಮಲ್ಲೇಶ್ವರಾ ||೨೨||

ವಾರಿಧಿ ತನ್ನೊಳಿರ್ದ್ದ ಬಹುರತ್ನಮನಿತ್ತುದು ಬೇಡಿದರ್ಗ್ಗೆ ಮು |
ನ್ನೀರದು ರತ್ನಮಿನ್ನದಱೊಳಿಲ್ಲೆನಲಾಗದು ಬಲ್ಲರೀಗಳುಂ |
ಸಾರವೆನಿಪ್ಪ ವಸ್ತುಗಳನೆತ್ತಣಿನೊಂದುವರೆತ್ತಣಿಂದಮೀ |
ವಾರುವಮೋಡುಗುಂ ಗಗನದೊಳ್ ಜವದಿಂ ಗಿರಿಮಲ್ಲಿಕಾರ್ಜುನಾ ||೨೩||

ಯತ್ನಿಸಿದಂದೆ ಕಾರ್ಯದೊಳಗಪ್ಪುದೆ ಸಿದ್ಧಿ ನರಂಗೆ ದೈವಮೇ |
ಯತ್ನಿಸಿ ಮೋೞ್ಕೆನುತ್ತುಮೆರ್ದೆಗೆಟ್ಟಿರಲಾಗದು ಗೆಲ್ಲಸೋಲಗಳ್ |
ನೊತ್ನಮೆ ಅಣ್ಮೆಯುಣ್ಮೆ ಕೊನೆಗಾಣದೆ ಸೋಲ್ತೊಡೆ ದೈವಮುಂ ಕರಂ |
ನೂತ್ನವಿಧಾನದಿಂ ಭಜಿಯಿಸಲ್ ಸಫಲಂ ಗಿರಿಮಲ್ಲಿಕಾರ್ಜುನಾ ||೨೪||

ಓಲಯಿಪರ್ ಜನರ್ ಬಿಡದೆ ಲೋಕಹಿತೇಚ್ಛುಗಳೆಂದು ವಿದ್ಯೆಯಂ |
ಲೀಲೆಯಿನೆಲ್ಲರುಂ ಪಡೆವಿನಂ ಧನಮುಂ ಗೃಹಮುಂ ಪ್ರಯತ್ನದಿಂ |
ಪಾಲಿಸಿಯೋಜರಂ ನಿಱಿಸಿ ಶಾಸ್ತ್ರದ ದಾನದೆ ಧನ್ಯರಾಗಿ ವಿ |
ದ್ಯಾಲಯಮಂ ಪುದುಂಗೊಳಿಪ ಸಜ್ಜನರಂ ಗಿರಿಮಲ್ಲಿಕಾರ್ಜುನಾ ||೨೫||

ನರರೊಳಗುಂಟು ಜಾತಿ ಪಲವಲ್ಲಿ ಕೆಲಂಬರೆ ಜಾತಿಗುತ್ತಮರ್ |
ಪಿರಿಯರೆಮೆಂದು ಜೀವವಧೆಗೆಯ್ದಡಗುಂಡನೃತಕ್ಕೆ ನೋಂತು ದೇ |

ವರನಿೞಿಕೆಯ್ದು ಕಳ್ಳನುಣಲಾಟಿಪರಿನ್ನರೆ ಜಾತಿವಳ್ಳರಿ |
ನ್ನರ ಸಮರಾರುಮಿಲ್ಲ ಪೊಲೆಯರ್ ಪೆಱವರ್ ಗಿರಿಮಲ್ಲಿಕಾರ್ಜುನಾ ||೧೬||

ಮನುಜಕುಲಂಗಳಂ ಗಣಿಯಿಸಲ್ ನೆರೆವಾ ಮನುಜೇಂದ್ರರೊರ್ಮೆಯು |
ಲ್ಲೆನಿಬರೊ ಮಾಂಸಮುಣ್ಬರೆನಿಬರ್ ಕೊಲೆಗೆಯ್ವರೊ ಕಳ್ಳನೀಂಟುವರ್ |
ಎನಿಬರೊ ಚಾಡಿವೇೞ್ವರೆನಿಬರ್ ಧನಲೋಭದೆ ಲಂಚಕೊಳ್ವರಿ |
ನ್ನೆನಿಬರೊ ಲೆಕ್ಕಿಸಲ್ ನೆರೆಯರೇಕಱಿಯೆಂ ಗಿರಿಮಲ್ಲಿಕಾರ್ಜುನಾ ||೧೭||

ಶಿರವೆಮಗೆಂದು ದೇಹವೆಮಗೆಂದಡಗಂ ತವೆ ತಿಂಬ ಯುಕ್ತಿಗೇ |
ನೊರೆದಪೆನಣ್ಣ ಪಂಚಮರೆ ಲೇಸವರಿಂದೆನೆ ಸಾಲ್ಗುಮಲ್ತೆ ಶಾಂ |
ಕರಮತದಿಂದೆ ಜಾತಿಯೆರಡಾದುವು ಮುನ್ನಮೆ ಜೀವಹಿಂಸೆಗಾ |
ದರಿಸೆ ವಿಜಾತಿ ಜಾತಿಗಱನೇ ಪಿರಿದೈ ಗಿರಿಮಲ್ಲಿಕಾರ್ಜುನಾ ||೧೮||

ವಾರಕದೊರ್ಮೆ ತಿಂಬರರೆಬರ್ ಕೆಲರೆಕ್ಕಟಿಯೊಳ್ ಪಲರ್ಮೆ ದಲ್ |
ಸಾರವಿದೆಂದು ಲೋಗರಱಿವಂತರೆಬರ್ ಕೆಲರ್ಗೌಷದಂ ಗಡಾ |
ಪಾರಯಿಸುತ್ತೆ ಕಳ್ಕುಡಿವರಿನ್ನರೆಬರ್ ಕೆಲಬರ್ ವಿದೇಶದಿಂ |
ತಾರದ ಮದ್ಯಮಂ ಕುಡಿಯಲೊಪ್ಪುವರೇಂ ಗಿರಿಮಲ್ಲಿಕಾರ್ಜುನಾ ||೧೯||

ಯವನರುಮಾರ್ತರಿಲ್ಲಕಟ ಹಿಂಸಿಸಲಾವಗೆಯಿಂದೆ ಮದ್ಯಪಾ |
ನವನೆಳಸರ್ ದಯಾರಸದೆ ಮುೞ್ಗಿವರಾದಮೆ ಜೋಳಮುಂಡು ಸಾ |
ಕುವರೊಡಲಂ ವಿದೇಶದವರೆಂದೊಡೆ ಜಾತಿವಿಜಾತಿಗಳ್ಗೆ ಭೇ |
ದವನಱನೊಂದೆ ಸಾಲ್ಗುಮಱಿಪಲ್ ಪೆಱತೇಂ ಗಿರಿಮಲ್ಲಿಕಾರ್ಜುನಾ ||೨೦||

ಓಮನೆ ಟೋಮೆನಲ್ ನೆರೆಯದಾತನುಮೊರ್ಮೆ ಕಲಾಪ್ರವೀಣನೆಂ |
ಪಾಮರರೆನ್ನನೆಂತಱಿವರೆಂದು ವಿಗುರ್ವಿಸೆ ಕಂಡ ಪಂಡಿತ |
ಸ್ತೋಮಮಿವಂಗೆ ತಕ್ಕ ಬಿರುದಂ ಕುಡೆ ದಿಮ್ಮದನಾಗಿ ಬಾೞ್ವುದೇ |
ನೀಮಹಿಯೊಳ್ ದಲಚ್ಚರಿಯೆ ಸತ್ಯವಲಾ ಗಿರಿಮಲ್ಲಿಕಾರ್ಜುನಾ ||೨೧||

ನಲವಿನಿನೆಂತುಮೋದಿದೊಡಮೋಜನೆ ನಾಡಿಗನೋದಿನೊಳ್ ಧರಾ |
ವಲಯಮನಿತ್ತುಮಂ ತೊೞಲದಿರ್ದೊಡೆ ಕೂಪದ ಕಪ್ಪೆಯೆಂದು ಪಿ |
ತ್ತಿಲಗಿಡು ಮರ್ದೆಯೆಂದು ಜಱೆಗುಂ ಜನಮಂತಱನೆಲ್ಲ ನಾೞ್ಕೆಳೊಳ್ |
ಸಲೆಯುಲೆದಾಡೆ ಕೀರ್ತಿವಡೆಗುಂ ಮನುಜಂ ಗಿರಿಮಲ್ಲಿಕಾರ್ಜುನಾ ||೨೨||

ಮನೆಮನೆಯೆಂದು ಕೆಮ್ಮನಿರಲಕ್ಕುಮೆ ಕುಳ್ಳಿರೆ ನಾಡು ನಾಡೆ ಸು |
ಮ್ಮನೆಯುಣಲಿಕ್ಕದಾ ಮನೆಯನೊಲ್ಲದೆ ನಾಡುಮನೊಲ್ಲದಂಗೆ ನೆ |
ಟ್ಟನೆ ಪಣಮುಂಟುಪಾಯುವೊಳದೆಲ್ಲಿಯುಮಿರ್ಪುದು ಕೀರ್ತಿ ಸಾಸವೊಂ |
ದಿನಿತುಮದಿಲ್ಲದಂಗೆ ಪದನಲ್ತುಱನುಂ ಗಿರಿಮಲ್ಲಿಕಾರ್ಜುನಾ ||೩೩||

ಶಿವಶಿವ ಎಂದು ಕುಳ್ಳಿರದೆ ಕೆಮ್ಮನೆ ವಿತ್ತಕೆ ಬಟ್ಟೆಯಂ ಪುಡುಂ |
ಕುವ ಬಗೆಯುಳ್ಳವಂಗವುಸದಂ ಪಲವುಂಟಿಲೆ ಕೇಶತೈಲಮುಂ |
ಟವಗುಣಮುಂಟು ಸಿದ್ಧರಸವುಂಟವಲೋಹವಸತ್ಯವುಂಟಿವೆ |
ಲ್ಲನನುಱದೇಕೆ ಬಾಯ್ಬಿಡುವರೋ ಮರುಳರ್ ಗಿರಿಮಲ್ಲಿಕಾರ್ಜುನಾ ||೩೪||

ವಾಜಿಯವೇಗಮಂ ಪವನವೇಗಮನಾ ಮನದೊಂದುವೇಗಮಂ |
ರಾಜನಕಾರ್ಯದೊಳ್ ತಳೆದ ಮಂತ್ರಿಯನೆಕ್ಕಟಿಯೊಳ್ ನಮೋಸ್ತುವೆಂ |
ದೋಜೆಯಿನೆಯ್ದಿ ಬಂದಿಸಿ ಪಿಸುಣ್ನುಡಿಯಿಂ ಗೆಲಲಾರ್ಪ ಟಕ್ಕಿಗಂ |
ಗೀಜಗಮಂಜುತಿರ್ಪುದೆನಲಚ್ಚರಿಯೇ ಗಿರಿಮಲ್ಲಿಕಾರ್ಜುನಾ ||೩೫||

ಯಮಭಟನೆಂತುಟಂತೆ ನಡೆನೀಂ ಧರೆ ಕಂಪಿಸುವಂತೆ ಕಳ್ಳರಾ |
ತಮರೆನೆ ಸಂಬಳಂ ಸುಲಿಗೆ ಲಂಚಮಿವೆಲ್ಲವನೊಟ್ಟಿಕೊಳ್ ಬಱ |
ಕ್ಕಮರ್ವ ಕವತ್ತೆಯಂ ಕೊಲೆಯುಮಂ ಬಗೆಗೊಳ್ಳದೆ ಕೂಗದಿರ್ದ್ದ ವಿ |
ತ್ತಮನೆ ತೆಮಳ್ದಿನುತ್ತೆ ನುಡಿವರ್ ಕೆಲಬರ್ ಗಿರಿಮಲ್ಲಿಕಾರ್ಜುನಾ ||೩೬||

ಓದಿದೊಡಾಯ್ತೆ ಬೇಲ್ವಿ ಪರಮಾರ್ಥಮದೆಲ್ಲಮುಮೋದಿಯೋದಿ ಸಂ |
ಪಾದಿಸಲಾಱದಿರ್ಪರರೆಬರ್ ಪಣಮಂ ಪಣಮುಳ್ಳೊಡೋದನೆಂ |
ತಾದೊಡಮುಱ್ತೆಯಿಂ ಪಡೆಯಲಾದಪುದಿಮ್ಮನೆ ಜೀವಿಸಲ್ಕೆ ಕ |
ಲ್ತೋದುವ ವಿದ್ಯೆಯಂ ಕರುಣಿಸಾದರದಿಂ ಗಿರಿಮಲ್ಲಿಕಾರ್ಜುನಾ ||೩೭||

ನಡುವಗಲಲ್ಲಿ ನೋಟ್ಪಿ ಜನರಂ ಬೆಱಗಾಗಿಸಿ ಕೊಳ್ಗೆ ವಿತ್ತಮಂ |
ತಡೆಯದರಿಲ್ಲದಂದು ಸೆಱೆಗುಯ್ಯದ ಮುನ್ನಮೆ ಕಳ್ಗೆ ಕಳ್ದು ಕಾ |
ಪಿಡಲರಿದಾಗೆ ಕಾಪಿನವರಾ ನೆರನಂ ನೆರವಾರ್ಗೆ ಕಳ್ಳರಿ |
ರ್ಪೆಡೆಯೊಳೆ ನಿಲ್ಗೆ ಬಾಳ್ಗೆ ಗುಣಮೇಂ ಪಣಮೇ ಗಿರಿಮಲ್ಲಿಕಾರ್ಜುನಾ ||೩೮||

ಮಱೆತಾನೆಕ್ಕಟಿಯಲ್ಲಿ ಮುನ್ನೆಸಗಿದಾ ಪಾಪಂಗಳಂ ನೋಡಿ ಬೇ |
ಸಱದೀಗಳ್ ದಯೆಗೆಯ್ದನುಗ್ರಹಿಸಲಾ ದುಷ್ಕರ್ಮದಿಂದಪ್ಪುದೇ |

ತಱಿ ಕುಂದೆಂದು ಶುಭೋದಯಂ ಸಮನಿಕುಂ ಮತ್ತೆಂದು ಮನ್ಮಾನಸಂ |
ಸೆಱೆವಿಟ್ಟೀಗಳೆ ನಿನ್ನ ಚೆನ್ನಡಿಗಳೊಳ್ ಶ್ರೀಶೈಲಮಲ್ಲೇಶ್ವರಾ ||೩೯||

ಶಿವ ಸಯೆ ತಾಪಸಂ ನರರ ಪೊತ್ತವಿಮಾನವನೀಕ್ಷಿಸುತ್ತೆ ಹೋ |
ಶಿವ ನರವಾಹನಂ ನಿನಗೆ ತಕ್ಕುದೆ ಬಾ ಇೞಿ ಎಂದು ಪೇೞಿಲಾ |
ತವಸಿ ವಿಮಾನದಿಂೞಿದು ಬಂದೊಡನಾಡುತುಮಿರ್ದ್ದನೆಂದೊಡಾ |
ಚವುಡರಸರ್ಗಸಾಧ್ಯವೊಳದೇ ಜಗದೊಳ್ ಗಿರಿಮಲ್ಲಿಕಾರ್ಜುನಾ ||೪೦||

ವಾತಿವೊಲೀತನುಂ ಜಲಧಿಲಂಘನದಿಂ ಪಡೆದೊಂದು ಕೀರ್ತಿ ಸ |
ಲ್ಗೀತನನೊಂದಿ ಪಿಂಬಡಿನೊಳೆಯ್ದುವ ನೀೞೆಯ ಜಾತಿನೀತಿಗ |
ಳ್ಗೀತು ಕುಲಂಗಳಂ ಧವಳಿಸಲ್ ಬಗೆದಂ ಜಸದಿಂದಮೆಂದೊಡೀ |
ಖ್ಯಾತಿಗೆ ಭಾರತೀಯನೆ ವಲಂ ಪಿರಿಯಂ ಗಿರಿಮಲ್ಲಿಕಾರ್ಜುನಾ ||೪೧||

ಯತ್ನಿಪ ಮಾನವಂಗೆ ನೆರೆಯೇಂ ಪೊಱೆಯೇಂ ಧನವೊಂದೆ ಮುಖ್ಯಮಾ |
ಪ್ರತ್ನವಿಧಾನದೊಳ್ ನೆಲಸಲಕ್ಕುಮೆ ಲೆಕ್ಕಿಪರಾರೊ ಸೂತ್ರಮೇಂ |
ರತ್ನಮೆ ಕೇಳ್ವರಾರೊ ಪಟಿವಾತುಗಳಂ ಧನಲಾಭಮಾದೊಡಾ |
ಯತ್ನಮೆ ರತ್ನಮಕ್ಕುಮಱನೇಂ ತೆಱನೇಂ ಗಿರಿಮಲ್ಲಿಕಾರ್ಜುನಾ ||೪೨||

ಓಲಗಸಾಲೆಯಲ್ಲಿ ನೆರೆದಿರ್ಪ್ಪ ಜನರ್ ಸಲೆ ಗೌರವಕ್ಕೆ ತಾ |
ಮಾಲಿಸಿ ಪೇಳ್ವ ಪೆರ್ಗ್ಗಡೆಯುಮಾತುಗಳಂ ಬೆಸಕೆಯ್ವೆಮೆಂಬರಾ |
ಕೂಲಿಯ ಕಳ್ಳರಂ ಕವಣೆಗಳ್ಳರನಂಗಡಿಗೊತ್ತುಗಳ್ಳರಂ |
ಕೀಲಿಸಿ ಬಂದಿಯೊಳ್ ಕಡೆಯೊಳಾದರಿಪರ್ ಗಿರಿಮಲ್ಲಿಕಾರ್ಜುನಾ ||೪೩||

ನಗೆ ಮೊಗದಲ್ಲಿ ತೋಱೆ ಒಳಕೆಯ್ದಿರೆ ಕೈತವಮಿರ್ದ್ದದೋಷಮುಂ |
ಪೊಗೞ್ದಿರೊಳ್ ಗುಣಕ್ಕುಱದೆ ಮಚ್ಚರಿಸುತ್ತೆ ತೆಗೞ್ದೊಡೊಲ್ದು ಚಾ |
ಡಿಗೆ ಬಗೆದಂದು ಬಿನ್ನನೆ ಬಿಸುಟ್ಟೊಡನೋಡುವ ಮಿತ್ರನೊಂದು ಕೂ |
ರ್ಮೆಗೆ ಗುಱಿಯಾಗದಂತೆನಗೆ ಮಾಡೊಲವಿಂ ಗಿರಿಮಲ್ಲಿಕಾರ್ಜುನಾ ||೪೪||

ಮಡೆಯರ ಗೋಷ್ಠಿಯೊಳ್ ಮರುಳನಂತಿರೆ ಬಲ್ಲರ ಕೂಟದಲ್ಲಿ ಬಾ |
ಯ್ಬಡಿಕನ ಭಂಗಿಯಿಂ ತಿರಿಕರೊಕ್ಕಲೊಳೆಗ್ಗನಪಾಂಗಿನಿಂದೆ ಪೆ |
ಣ್ಬಡೆಯೊಳೆ ವಾತಿವೊಲ್ ಸುಲಿಗೆಗಾಱರ ತಂಡದೊಳಾನೆಯಂತೆ ಸ |
ಲ್ವೊಡೆ ಪದನಲ್ಲದಂಗಭವ ನಿನ್ನಪದಂ ಗಿರಿಮಲ್ಲಿಕಾರ್ಜುನಾ ||೪೫||

ಶಿವ ಶಿವ ಈಗಳೆನ್ನ ಬಗೆವೋದುದು ಬೇಳ್ಪನಿತರ್ಥಮಂ ತೆಮ |
ಳ್ದವ ಬಗೆಯುಳ್ಳವಂ ಪಿರಿದು ಬಡ್ಡಿಗೆ ಸಾಲವನೊಟ್ಟಿಕೊಂಡು ಕೇ |
ಳ್ದವರ್ಗಿರದೀವೆನೆಂದು ಕೊನೆಯೊಳ್ ಪಣಮಿಲ್ಲೆನುತರ್ಥಹೀನ ಪ |
ಟ್ಟವನೊಡನೇಱಿದಂದರಸರುಂ ಕೊಡಿಸರ್ ಗಿರಿಮಲ್ಲಿಕಾರ್ಜುನಾ ||೪೬||

ವಾಗುರೆಯಂತೆ ಬೀಸು ನುಡಿಯಂ ಪಗೆವರ್ ಬೆಱಗಾಗಿ ಬಿಲ್ವನಂ |
ಲೋಗರಸುದ್ದಿಯೊಳ್ ಹಿತವನಾಚರಿಸಲ್ ನೆರವಾಗದಿರ್ ಛಲ |
ಕ್ಕೇಗಳುಮಾಡದಿರ್ ದಿಟವನೆಂದುಱೆ ಲೌಕಿಕನೀತಿಯಂ ಧರಾ |
ಭಾಗದೊಳಾದರಂ ಬೆರಸು ಬೋಧಿಸುವರ್ ಗಿರಿಮಲ್ಲಿಕಾರ್ಜುನಾ ||೪೭||

ಯಶಮಂ ಮುಂಪಡೆದಿರ್ದ್ದ ಮಾನವರ ಮಾತಂತಿರ್ಕೆ ಭೂಪಾಲರಂ |
ಪಶುವಂ ಮೋದುವವೋಲೆಮೋದಿಯವರಾಜ್ಞೋಲ್ಲಂಘನಂಗೆಯ್ದು ಕ |
ರ್ಕಶರಾವೆಂದುಱಿದಿರ್ದ್ದ ಬಂಧುಗಳನಾದಂ ಕೊಂದವರ್ಗ್ಗೀಗಳೇಂ |
ವಶಮಾಗಿರ್ಪ್ಪುದೊ ಕಾಳದಂತಿರಯಶಂ ಶ್ರೀಶೈಲಮಲ್ಲೇಶ್ವರಾ ||೪೮||

ಅಕ್ಷರಮಾಲೆಯೊಳ್ ಮೊದಲಕಾರಮದೆಂತು ಜಗತ್ತಿನಲ್ಲಿಯಂ |
ತಕ್ಷರದೇವರೊಳ್ ಮೊದಲಿಗಂ ಗುರುಜಂಗಮಲಿಂಗಮೂರ್ತಿ ಪಂ |
ಚಾಕ್ಷರನೈಮೊಗಂ ಪರಮಸೌಖ್ಯಮನೊಂದುಗುಮೊಲ್ದು ನಿನ್ನನಾ |
ಮಾಕ್ಷರಮೊಂದನುಚ್ಚರಿಸೆಯುಂ ಮನುಜಂ ಗಿರಿಮಲ್ಲಿಕಾರ್ಜುನಾ ||೪೯||

ಆಡಿದೆಯಲ್ತೆ ಮುನ್ನೆ ಸುತನಂತಿರೆ ಬಿಜ್ಜಳೆಗೊಲ್ಮೆಯಿಂದೆ ನೀಂ |
ಬೇಡಿದೆಯೆಂದು ತನ್ನ ಮಗನಂ ಕುಡೆ ಸೆಟ್ಟಿಗೆ ಗರ್ವಭಂಗಮಂ |
ಮಾಡಿದೆಯಲ್ತೆ ನಿಂಬಿಯಿದಿರೊಳ್ ಹರ ನಿನ್ನನಲಂಪಿನಿಂದೆ ಕೊಂ |
ಡಾಡಿದವಂಗೆ ಮತ್ತೆ ಮಱುಮೆಯ್ಯೊಳವೇ ಗಿರಿಮಲ್ಲಿಕಾರ್ಜುನಾ ||೫೦||

ಇರುಳೊಳೆ ಕಂಡು ನಿನ್ನವತೆಯುಂ ಪಲವಂ ಮಱುಗುತ್ತೆ ಸುತ್ತಣೆ |
ರ್ದ್ದರ ಕಡುಕೈತವಕ್ಕಗಿದು ದೇಗುಲಮಂ ಸರಿಗೆಯ್ದು ಕಂಚಿಯೊಳ್ |
ಪಿರಿದೊಲವಿಂದೆ ತನ್ನ ಜಡೆಯಂ ಸೊಡರ್ಗಿತ್ತನ ಭಕ್ತಿಭಾವಮಂ |
ಕುರಿಸಿದೊಡೆನ್ನನುಂ ಮಱುಭವಕ್ಕೆಱಗಂ ಗಿರಿಮಲ್ಲಿಕಾರ್ಜುನಾ ||೫೧||

ಈವೊಡೆ ಮಾನವರ್ ನಿನಗಮಾರ್ಪರೆ ಭಕ್ತರ ಭಕ್ತಿಯೆಂತುಟೆಂ |
ದೋವಿ ಪರೀಕ್ಷಿಸಲ್ ಬಗೆದೆಯಲ್ಲದೆ ನಿನ್ನವೊಲಾರೊ ಕೇಳ್ದವರ್ |

ದೇವರೊಳನ್ಯಸುಂದರಿಯನೞ್ತಿಯೆ ಭಕ್ತರೊಳಾರೊ ಕೊಟ್ಟವರ್ |
ಧೀವರಸಿಂಧು ಬಲ್ಲಳನವ್ರೋಲ್ ಪೆಱವರ್ ಗಿರಿಮಲ್ಲಿಕಾರ್ಜುನಾ ||೫೨||

ಉಗುತರೆ ಕಣ್ಣನೀರ್ ನಿನಗೆ ಕಂಡು ಪಲುಂಬಿ ಚಿಕಿತ್ಸೆಗೆಯ್ಯಲೇ |
ವಗೆ ತನಗೆಂದು ನೇತ್ರವನೆ ಕಿೞ್ತಿಡಲೊಳ್ಳಿತೆನುತ್ತೆ ಕಿೞ್ತಿಕೂ |
ರ್ಮಗೆ ಸಲೆ ಸೋಲ್ತ ತಾಪಸಿಯುಮಂ ತಲೆವಾಗಿಸಿದಾ ಮಹಾತ್ಮನಂ |
ಪೊಗೞ್ವೊಡೆ ಕಣ್ಣಪಣ್ಣಗಳ ಜೋಡೆ ಪೆಱರ್ ಗಿರಿಮಲ್ಲಿಕಾರ್ಜುನಾ ||೫೩||

ಊಹೆಗೆ ಬಾರದಾತ್ಮಭವನಕ್ಕೊಡನಾಡಿಗಳಿಲ್ಲದೞ್ತಿಯಿಂ |
ದೋಹಿಲನೊರ್ವನೇ ತಳರ್ವಬೇಗನೆ ಫೊಳ್ಳನೆ ನಕ್ಕು ಬರ್ಕ್ಕದಾ |
ಸೋಹಿಗಳೆಲ್ಲರುಂ ನೆರೆದು ಪೋಗುವೊಮೆಂದುಱೆ ಸಾಱಿ ಸಿದ್ಧಸ |
ನ್ನಾಹದೆ ಬಂದ ಗೂರ್ಜರನನೋವಿದೆಯ್ಯೆ ಗಿರಿಮಲ್ಲಿಕಾರ್ಜುನಾ ||೫೪||

ಎಮಗೆಮಗೆಂಬ ವಾರವನಿತಾರತಮಾನುಷರಂತೆ ಸೂಳೆಗೆ |
ಯ್ವಮನದೆ ತಾನುಮಂದಿನಿರುಳೊಳ್ ಮನೆಯಂಪೊಱಮಟ್ಟು ಸೂಳೆಯಾ |
ಟಮೆ ಶಿವಪೂಜೆಯೆಂದೆಣಿಸಿ ನಿನ್ನನೆ ಜಾನಿಸಿ ಜಾಗರಿರ್ದ್ದ ಸಂ |
ಗಮನ ಶಿವೈಕ್ಯಮುಗ್ಧತೆಯನಾರಱಿವರ್ ಗಿರಿಮಲ್ಲಿಕಾರ್ಜುನಾ ||೫೫||

ಏತಱ ನಂಜನುಂಡೆಯಭವಾ ವಿಷಮಲ್ಪವಿದೆಂದಸಡ್ಡೆಯಿಂ |
ದೀತೆಱನಿರ್ಪ್ಪದೇ ವಿಷವನೀಗಳೆ ಕಾಱದೆ ಬಿಟ್ಟೊಡಯ್ಯ ನಿ |
ನ್ನೀ ತನುವೊಳ್ ವಲಂ ಪರೆದು ಕೊಲ್ಲದೆ ಮಾಣದು ಕಾಱುಕಾಱು ಎಂ |
ದಾತುರಿಸುತ್ತುಮಿರ್ದ್ದ ಪಶುಪಂಗೆಣೆಯಾರ್ ಗಿರಿಮಲ್ಲಿಕಾರ್ಜುನಾ ||೫೬||

ಐಮೊಗಮುಂಟು ನೋಡೆ ತನಗಂ ನಿನಗಂ ನಿನಗಂತಱಿಂದೆ ಕೆಂ |
ದಾಮರೆಯಲ್ಲಿ ಪುಟ್ಟಿದವನುಂ ಸಮನಾದಪನೆಂದು ಕಾಯ್ದೆಯೋ |
ತಾಮಸದತ್ತಣಿಂ ಕಿಱಿದು ರಾಜಸಮೆಂದಱಿಪಲ್ಕೆ ಸತ್ವದಿಂ |
ತಾಮಸವಿಲ್ಲದಂತಿಱಿದೆಯೋ ವಿಧಿಯಂ ಗಿರಿಮಲ್ಲಿಕಾರ್ಜುನಾ ||೫೭||

ಒಗೆಯದು ದೇವರಂ ಪೞಿದವಂಗೆ ಸುಖಂ ಜಗದೀಶನತ್ತ ಕಂ |
ಡುಗುೞ್ವುದು ದೋಷಮೆಂಬ ನುಡಿಯುಂ ಪುಸಿಯಾದುದು ನಕ್ಕನಾರರಾ |
ಸೊಗಸಿನ ಕಾಂತೆಯಿಂ ಹರಹರಾ ಶಿವ ನಿನ್ನಯ ಮೆಯ್ಮೆಯಣ್ಮಪೊ |
ದುರ್ಗೆಗಳನ್ಯರೆತ್ತಱಿವರಾಪ್ತರವ್ರೋಲ್ ಗಿರಿಮಲ್ಲಿಕಾರ್ಜುನಾ ||೫೮||

ಓಮೆನೆ ನಿನ್ನ ಮೂಱು ನಯನಂ ಕ್ರಮದಿಂ ಶಶಿ ಭಾನು ವಹ್ನಿ ಮ |
ತ್ತೋಮೆನೆ ನಾದಬಿಂದುಕಳೆಗಳ್ ಕ್ರಮದಿಂದಱಿವಣ್ಮ ಕೆಯ್ಮೆಗಳ್ |
ತಾಮಿವಱಿಂದಮುದ್ಭವಿಸುಗುಂ ಪರದೈವಮಿದೆಂದು ಮುನ್ನೆ ನಿ |
ನ್ನೋಮಿನ ವ್ಯೆಮೆಯಂ ತಿಳಿಪಿದೈ ತರದಿಂ ಗಿರಿಮಲ್ಲಿಕಾರ್ಜುನಾ ||೫೯||

ಔಡಲ ತೈಲಮಂ ಸವಱಿ ನಿನ್ನೊಡಲಂ ನೆಱೆ ನೇರಿತಾಗಿಸಲ್ |
ಬಾಡಬನಾರ್ತನಲ್ಲಕಟ ಏವೆನಿದರ್ಕಿರಲೊಲ್ಲೆನೆಂದು ಗೋ |
ಬಾಡುತೆ ಸಾವಬೇಗದೊಳಗೆಲ್ತಿರೆ ನೀಂ ನಡೆನೋಡಿ ನಿನ್ನಕೂ |
ತ್ತಾಡಿಯ ನಾಟ್ಯದಿಂ ತಣಿವುದೇನರಿದೇ ಗಿರಿಮಲ್ಲಿಕಾರ್ಜುನಾ ||೬೦||

ಅಂದು ಮರಲ್ಗೆ ನೀಡಿ ಕರಮಂ ಮಿಗೆ ಮೂಸಿದ ಮೂಗುವೋಗಲಾ |
ಸುಂದರಿ ನೀಡದಿರ್ದ್ದ ಕರಮಂ ಬೆರಲಿಂ ಸೆಳೆದುರ್ಚಿ ಬಾಚಿಯಿಂ |
ದಂ ದಿಟವಾಗಿ ತುಕ್ಕಡಿಸಿದಾ ನರಸಿಂಹನ ಭಕ್ತಿಗೊಲ್ದು ಕೈ |
ಯಂ ದಯೆಗೆಯ್ದು ಮೂಗನೊಸೆದಿತ್ತೆಯೆಲಾ ಗಿರಿಮಲ್ಲಿಕಾರ್ಜುನಾ ||೬೧||

ಅಃ ಕಿಱುಗೂಸು ಬಂದಳೆನುತೊಲ್ಲೆಯೊ ಎನ್ನಪರಾಧವೇನೊ ಪೇಳ್ |
ಚಿಃ ಕಡುಕಾಯ್ವರೆನ್ನ ಜನನೀಜನಕರ್ ಕೆನೆವಾಲನೀಂಟುನೀಂ |
ಉಃ ಕುಡಿದಲ್ಲದಾಂ ತೊಲಗೆನೆಂದು ಸಲುಂಬಿದ ಚೆನ್ನೆಯಂತೆವೋ |
ಲಾಃ ಕೊಡಗೂಸುಮುಂಟೆ ಪೆಱಗೂಸುಗಳೊಳ್ ಗಿರಿಮಲ್ಲಿಕಾರ್ಜುನಾ ||೬೨||

ಕರಿ ಕೊಲೆ ಭಕ್ತನಂ ಮದದೆ ಪೂವಿನತೋಂಟದೆ ನೋಡಿಯಾರುತ |
ಬ್ಬರಿಸೆಱೆವತ್ತರಂ ನವಿಸಿ ಕಟ್ಟದೆ ಬಿಟ್ಟಪರಾಧಕೆನ್ನನೀ |
ಶಿರಮನೆ ಕೊಳ್ಳಿಮೆಂದು ನಯದಿಂ ನುಡಿದಾ ಕರವೀರನಂತೆ ಕಿಂ |
ಕರರಪರಾಧಕಾರ್ ತಲೆಯನೊಡ್ಡುವರೈ ಗಿರಿಮಲ್ಲಿಕಾರ್ಜುನಾ ||೬೩||

ಖಳನೆಳೆತಂದ ನೇಣ್ಪಱಿದು ದೇಗುಲಮಂ ಕುಱಿ ಪೊಕ್ಕೊಡೆಯ್ದಿ ಜೆ |
ನ್ನೊಳೆ ಬಿಡೆನೆಂದವಂಗೆ ಪಣಮಂ ಕುಡಲುಂ ಛಲದಿಂದೆ ಬಂದಸುಂ |
ಗೊಳದಿರೆನೆಂದ ಧೂರ್ತನಸುವಂ ಕೊಳಲುಂ ಸಲೆ ಸಾಲ್ವ ಬೊಮ್ಮಯಂ |
ಗಳ ವರಕಿನ್ನರೀರವಮೆ ರಮ್ಯವಲಾ ಗಿರಿಮಲ್ಲಿಕಾರ್ಜುನಾ ||೬೪

ಗಱಿಯಿರೆ ಪಕ್ಕಿಯೆಂದು ಕೊಲಿಪರ್ ಹರ ನಿನ್ನೆಡೆಗೆಯ್ದುದಂತೆ ಮೇಣ್ |
ಕುಱಿಯುವೊಲಿರ್ದೊಡೆನ್ನಡಗನಾಗಳೆ ಬೇಯಿಸಿ ತಿಂದು ತೇಗುವರ್ |

ಪಱಿಮೆವೊಲೊಲ್ದು ನಿನ್ನಡಿಗೆ ಬಿೞ್ದೊಡೆ ಕಳ್ಯಣಿಯೆಂದು ಬಯ್ವರಂ |
ತಱಿನೆನಗೀಗಳೀ ಭವದೊಳೊಲ್ವುದು ನೀಂ ಗಿರಿಮಲ್ಲಿಕಾರ್ಜುನಾ ||೧೫||

ಘನಪಥಕೇಱಿಯಲ್ಲಿ ಖಚರರ್ಕ್ಕಳನಿಕ್ಕಿದ ಭಾರತೀಯರಾ |
ಘನಚರಿತಂ ಜನರ್ಗೆ ಪುಸಿಯೆಂದೆನಿಸಿತ್ತದು ಮುನ್ನಮೀಗಳೀ |
ಜನಪದಕಬ್ಧಿಯುಂ ಪವನಮಾರ್ಗದೆ ದಾಂಟೆ ಮಹೀಚರರ್ಕ್ಕಳಿ |
ಮ್ಮನೆ ಬರೆ ಹಸ್ತಿನಾವತಿಗೆ ನಂಬುವರೈ ಗಿರಿಮಲ್ಲಿಕಾರ್ಜುನಾ ||೧೬||

ಸಙ್ಗರರಙ್ಗಮೆನ್ಬ ಕಡುಚಾಗದ ಬೀರದ ರಾಯನೆನ್ಬ ನೀೞ್ |
ಮಙ್ಗಳವಾದ್ಯಮೆನ್ಬ ಜಯಭೇರಿಯ ಭಾಙ್ಕೃತಿಯೆನ್ಬ ಚಿಃ ಜವ |
ಙ್ಗಙ್ಗಡಿ ಕೊಯ್ದು ಮಾನಿಸವೆಣಙ್ಗಳ ತೊಙ್ಗಲಿದರ್ಕ್ಕೆಪೇಸದಾ |
ತಙ್ಗಣವಿಲ್ಲಹಿಮ್ಸೆಯೊಳಗಾದರಮ್ಮೈ ಗಿರಿಮಲ್ಲಿಕಾರ್ಜುನಾ ||೧೭||

ಚವುಕದೆ ನಿಂತು ಮುಂದಿ ಮರುಳಪ್ಪನೆಗಂ ದಿಟಮಲ್ಲ ನಿಮ್ಮ ಶಾಂ |
ಭವ ಚರಿತಂ ದಿಟಕ್ಕೆ ಪೆಱವಂ ಪರಮುಂ ನಿಮಗೊಲ್ಗಮೋತುಮಾಂ |
ಸವನುಣೆ ಕಳ್ಳನೀಂಟೆ ಪದನೆಂದುಱೆ ಬುೞ್ಗನ ಬೇಗದಲ್ಲಿ ಸಾ |
ಱುವ ಜನರಿಂದೆ ಕಲ್ವ ಗುಣಮಾವುದೊ ಪೇಳ್ ಗಿರಿಮಲ್ಲಿಕಾರ್ಜುನಾ ||೧೮||

ಛಲದಿಂ ಸತ್ತರನಾರುಮಂ ಬರ್ದುಕಿಪಂ ತಾನೆಂದು ಕೊಂಡಾಡುಗುಂ |
ನೆಲನೆಲ್ಲಂ ಪುಸಿಯಕ್ಕುಮೆಂದು ಬರೆ ಮಾಯಾಪ್ರೇತಮಂ ಪೊತ್ತು ದು |
ಷ್ಕುಲರಾಗಳ್ ನಿಜಸತ್ವಮಂ ಮೆಱೆಯೆ ಚೌಡಾಚಾರ್ಯರಲ್ಲಿರ್ದ್ದವರ್ |
ತಲೆಯುಂಬಾಗಿಸಿ ಭಕ್ತರಪ್ಪುದರಿದೇ ಶ್ರೀಶೈಲಮಲ್ಲೇಶ್ವರಾ ||೧೯||

ಜನಮರುಳೆಂಬ ಜಾತ್ರೆಮರುಳೆಂಬ ಕೆಲಂಬರ ಹೇಳನಕ್ಕೆ ಕೆ |
ಮ್ಮನೆ ಗುರಿಯಾಗದಂತೆನಗೆ ಭಕ್ತಿ ಮನಂಗೊಳೆ ತುಂಗಭದ್ರೆಯೊಳ್ |
ತನುವಿನ ಕಿಲ್ಬಿಷಂ ಕಳೆಯೆ ಮಿಂದು ವಿಭೂತಿಯೊಳೊಲ್ದು ನಿನ್ನ ದ |
ರ್ಶನವನೆ ಮಾಟ್ಪಿ ಸೈಪನೆಸಗಾದರದಿಂ ಗಿರಿಮಲ್ಲಿಕಾರ್ಜುನಾ ||೨೦||

ಝುಳಪಿಸಿ ಖಡ್ಗಮಂ ಪೊಡೆದ ಬೇಗದೊಳಾಲದವೃಕ್ಷದಿಂದೆ ಕ |
ಣ್ಗೊಳಿಸುತುಮೆೞ್ಗಿಮೇ ವೃಷಭನಿಟ್ಟಿಯ ಪಣ್ಗಳನುಂಡು ಸಂತಸಂ |
ದಳೆವಗೆ ದೇವರುಂ ಮುಸುಟಿ ಚೌಂಡರಸರ್ಕ್ಕಳ ಕೈಮೆಯುಂ ಮನಂ |
ಗೊಳೆ ಪೊಗೞಲ್ಕದಾವ ಮನುಜಂ ನೆರೆವಂ ಗಿರಿಮಲ್ಲಿಕಾರ್ಜುನಾ ||೨೧||

ಅಞ್ಜುಗುವಮಾನೆಯುಮ್ ಮುಳಿದ ಸಿಂಗಕೆ ದಂತಿಯು ಪೊತ್ತ ಭಾರಮಱ್ |
ಗುಞ್ಜದೆ ಸಿಜ್ಗಮೆತ್ತುಗುಮೆ ರೋಷಮುಮಣ್ಮವೊನ್ದೆ ಜೀವಿಯಱ್ |
ಹಿಞ್ಜದೆ ಕೊನ್ದು ಪೀರ್ದ ರುಧಿರಮ್ ಬಲಮಿಾಗುಮೆ ರಕ್ತಮಾಂಸದಿ |
ನ್ದಞ್ಜನಿಯಿಕ್ಕಮುಗ್ರತೆ ದಲೆನ್ದೊರೆದೈ ಗಿರಿಮಲ್ಲಿಕಾರ್ಜುನಾ ||೭೨||

ಟಪಟಪಯೆಂದು ಪೇೞ್ವನಿತಱೊಳ್ ಮಲೆತಾಜಿಯನಿಕ್ಕಿಕೊಂದನಾ |
ವಿಪುಲಬಲಂ ನಿಜಾಸ್ತ್ರಹತಿಯಿಂದೆನೆ ಪೋ ಪುಸಿಯಲ್ಲಪೀಗಳುಂ |
ಅಪಗತಜೀವಮಾಗೆ ಜವದಿಂ ದಳಿಮಂ ತವೆಸುಟ್ಟುಕೊಲ್ಗುಮಾ |
ತಪನನ ತೇಜಮಂ ಕಿಡಿಪ ಯಂತ್ರಕುಲಂ ಗಿರಿಮಲ್ಲಿಕಾರ್ಜುನಾ ||೭೩||

ಠವಣಿಪ ಕಮ್ಮಯಿಪ್ಪ ಕವಿಗಳ್ ಶಿವಭಕ್ತರೊಳಿಲ್ಲ ಜೈನಪುಂ |
ಗವರೊಳೆ ಪೊನ್ನರನ್ನರೊಳರೆಂದೆನಲಾಗದು ಕಾಳಿದಾಸನಂ |
ತವರಿನರೆತ್ತ ಕಮ್ಮಯಿಸುವರ್ ವರಭಾರವಿ ಬಾಣರಂತೆವೊಲ್ |
ಠವಣಿಸಲಾರ್ಪರೇ ಧರಣಿಯೊಳ್ ಪೆಱವರ್ ಗಿರಿಮಲ್ಲಿಕಾರ್ಜುನಾ ||೭೪||

ಡಂಗುರಮಂ ಪಳಂಚಲೆದು ರಕ್ಕಸರಾಯನ ಧಾಳಿಗಣ್ಮೆನಿಂ |
ಸಂಗರರಂಗದೊಳ್ ಮಡಿದ ವೀರಭಟಾಳಿಯ ದೇಶಭಕ್ತಿಯಂ |
ಮುಂಗೆಲೆವಂದುದೀ ನೆಱೆದ ತೊೞ್ತುಗಳೊಳ್ ಬೆಸಕೆಯ್ದು ದಿವ್ಯವೀ |
ರಾಂಗನೆಯರ್ಕಳೋಜೆವಡೆದಾಳ್ವೆಸನ್ವೆ ಗಿರಿಮಲ್ಲಿಕಾರ್ಜುನಾ ||೭೫||

ಢಮುಢಮು ಶಬ್ದಮಿಕ್ಕೆ ಗಿರಿಯೇಱಿದೊಡಂ ನೆಱೆ ನೀರಪೊಕ್ಕೊಡಂ |
ಸಮರದೆ ಕೊಲ್ವ ನೀತಿಯೊಳದಿಂದಿನ ರಕ್ಕಸರಾಯನಾಜಿಯೊಳ್ |
ಸಮೆದ ವಿಷಾಸ್ತ್ರದಿಂ ನಿರಪರಾಧಿಗಳಂ ತವೆ ಕೊಂದ ಶಕ್ತಿಯಿಂ |
ದಮುಮು ವಿಭೂತಿಯುಕ್ಕವನ ರಾಜಗೃಹಂ ಗಿರಿಮಲ್ಲಿಕಾರ್ಜುನಾ ||೭೬

ರಣದೊಳಿದಿರ್ಚಿಕೊಂದ ಕಥೆ ಪಿಂಪಿೞಿರಾಯರ ಕಾಲದಲ್ಲಿ ಮಾ |
ಣ್ಗಣಮಿದಿರಾಗದಿರ್ದು ಬಿಲದೊಳ್ ಪುದುಗಿರ್ದು ವಿಷಾಗ್ನಿಯಿಂದೆ ಮಾ |
ರಣಶರಮಂ ಕರಂ ಕಱೆದೊಡಂ ಗೆಲಲಾಱದೆ ಬಂದ ಸೋಲಕೇಂ |
ತಿಣುಕುವರಿಂದಿನುಗ್ರರಣಕೇಸರಿಗಳ್ ಗಿರಿಮಲ್ಲಿಕಾರ್ಜುನಾ ||೭

ತಱಗೆಲೆಯುಂಡು ಬಾೞ್ದು ಕೊನೆಯೊಳ್ ಕಡುಸೊಕ್ಕಿರೆ ಮೆಯ್ಯತೀನದಿಂ
ದಱಗುಲಿ ಬಂದು ಕತ್ತರಿಪ ಪೋಂತನವೋಲಿರೆ ತಿಂದು ಬಾೞ್ದು ಸಂ |

ದೞಿನೊಳಗೊಲ್ಮೆಯಿಲ್ಲದೆ ಕುಮಾರ್ಗದ ಱಾಟಳದಲ್ಲಿ ಸುತ್ತೆ ಬಂ |
ದೞಿಕೆಯ ಮಿಃಱಿತ್ತು ನುಂಗಿನೊಣೆಗುಂ ನರನಂ ಗಿರಿಮಲ್ಲಿಕಾರ್ಜುನಾ ||೭೮||

ಥಳಥಳಿಸುತ್ತುಮೆಯ್ದೆ ತಟಿದಂಗನೆ ತೊೞ್ತೆನೆ ನಿಲ್ವಿನಂ ಸಮಂ |
ತಳವಡೆ ಪಂಚಭೂತಮುವನಾಳ್ವೆಸದೊಳ್ ವಶಮಾಗಿ ವಿದ್ಯೆಗಳ್ |
ಪೊಳೆಯೆ ಮಹೀಚರಂ ಬಯಸುವಂ ಜಗಮಂ ಜವನಲ್ಲಿಗಟ್ಟಲಾ |
ಗಳೆ ಕುಡುವೇಡವಂಗಕಟ ವಿದ್ಯೆಗಳಂ ಗಿರಿಮಲ್ಲಿಕಾರ್ಜುನಾ ||೭೯||

ದೞಿದುೞಿಮಾಡಿದಂ ನಿರಪರಾಧಿಗಳಿರ್ದೆಡೆಯಲ್ಲಿ ನೆತ್ತಱಾ |
ಪೊೞೆ ಪರಿಯಿತ್ತು ನಂಜುವೆರಸಿರ್ದುದು ಪೆರ್ದೊಱೆ ಪಿೞ್ಕೆನೇಟಿನೊಳ್ |
ಪೊೞಿಲಿದೆ ಮೊಟ್ಟನಾಯ್ತು ರಣಕೇಸರಿಗೇಕಿನಿತೊಂದು ಕೈಮೆಃಯೆಂ |
ಬೞಿಲಿಳೆಗಾಗದಂತೊಸೆದು ಪಾಲಿಸು ನೀಂ ಗಿರಿಮಲ್ಲಿಕಾರ್ಜುನಾ ||೮೦||

ಧನಿಕನಿವಂ ದರಿದ್ರನವನೋಜನಿವಂ ಕಡುಗಾಂಪನಾತನು |
ಕ್ಕಿರ್ನ ತುೞುಲಾಳವಂ ದಿಟದಿನಾಳ್ದನಿವಂ ಕುಲಮುಳ್ಳನೀತನಾ |
ತನೆ ಕುಲಹೀನನೆಂದುಸಿರ್ವುದೇಕೆಯೊ ಮಾಣದೆ ಜೀವಹಿಂಸೆಯಿಂ |
ತನುವಿನ ತೀನವಂ ಕಳೆವನೇವಿರಿಯಂ ಗಿರಿಮಲ್ಲಿಕಾರ್ಜುನಾ ||೮೧||

ನವೆಯದೆ ಮಾಯ್ದು ಸಂಸೃತಿಯ ಱಾಟಳದೊಳ್ ದಿಟಮಾಡಿ ಕಳ್ಳದಿ |
ರ್ದವಗುಣದಿಂದಮನ್ಯಸತಿಗಾಟದೆ ಹಿಂಸೆಗೆ ಪೇಸಿ ಮದ್ಯಪಾ |
ನವನುೞಿದಪ್ಪುದೆಂದಱಿಪದಿರ್ಪುದುಮುಂಟೆ ಮತಂಗಳೊಳ್ ಶಿವಾ |
ಧವಮತವೆಲ್ಲವೊಂದೆ ತಿಳಿದಂಗಱಿಯಲ್ ಗಿರಿಮಲ್ಲಿಕಾರ್ಜುನಾ ||೮೨||

ಪರಮಪವಿತ್ರರೆಂದೆಱಗಿ ಕೈಮುಗಿದಾ ನೃಪಸೂನುವಂ ಕರಂ |
ಪರಸದೆ ಪೋಗಲಿತ್ತಲುರಗಂ ಕಡಿಯಲ್ ಸಯೆ ರಾಜಪುತ್ರನಾ |
ದರದೆ ಕುಮಾರ ಏೞೆನುತುಮೆೞ್ಬಿಸಿ ಜೀವಮನಿತ್ತ ವೇಮನಾ |
ರ್ಯರೆ ಬಿಡದೆನ್ನುಮಂ ಪರಸುತಿರ್ಕ್ಕೆಲವಿಂ ಗಿರಿಮಲ್ಲಿಕಾರ್ಜುನಾ ||೮೩||

ಫಳದಭಿಲಾಷೆಯುಳ್ಳೊಡೆ ಧರಿತ್ರಿಯೊಳೇೞ್ಗೆಯಿನಿರ್ದುಬಾೞ್ವೊಡೇ |
ಗಳುಮಱಿವುಳ್ಳೊಡೊರ್ದು ಪದಪಿಂದೆ ಪರತ್ರೆಗೆ ಸಲ್ವೆಯಪ್ಪೊಡೀ |
ಗಳೆ ನಿಜಭಕ್ತಿಯಿಂ ಬಿಡದೆ ಪೂಜಿಸು ನೀನಭವಾಂಘ್ರಿಪಂಕಜಂ |
ಗಳನೆನುತಾವಗಂ ಕಲಿಸುವರ್ ಗುರುಗಳ್ ಗಿರಿಮ

ಬಲಮಂ ರೋಷಮೆಗೆತ್ತು ತಕ್ಕುದೆಲೆ ಮಾಂಸಾಹಾರವೆಂಬರ್ ಕೆಲರ್ |
ಕೆಲಬರ್ ಮುಂಮುನಿವರ್ಯರುಂಡು ಬಳೆದರ್ ಜನ್ಮಂಗಳಿಂದೆಂದಪರ್ |
ಕೆಲಬರ್ ಜಂತುಗಳೆಲ್ಲವುಂ ನರರ ಬಾಯ್ತುತ್ತೆಂದುಪೇೞ್ವರ್ ಮಹಾ |
ಬಲರಾ ಶಿಕ್ಷಕರುಣ್ಬುದಾವಡಬಳಂ ಶ್ರೀಶೈಲಮಲ್ಲೇಶ್ವರಾ ||೮೫|

ಭವಭಯಮುಂಟು ಪುಟ್ಟಿದೊಡನಾರ್ಗಮದರ್ಕ್ಕಧಿಕಂಗಡಾ ಪರಾ |
ಭವಭಯಮಂತದಂ ಕಿಡಿಸಿ ಮಾನವನಂ ಧೃತಿಗುಂದದಂತೆ ಭಾ |
ಗ್ಯವನೆನಿತಾನುಮಿತ್ತೊಸೆದು ಬೆಂಬಲಮಿರ್ದ್ದವನಂ ಮಹಾಜವಂ |
ಜವಭಯದತ್ತಣಿಂ ಪೊರೆವನಾಗೊಲವಿಂ ಗಿರಿಮಲ್ಲಿಕಾರ್ಜುನಾ ||೮೬|

ಮನೆಗೆಲಸಕ್ಕೆ ಪೇಸಿದಣುಗಂ ಬರೆ ಜಂಗಮವೇಷದಿಂದೆ ಭೋಂ |
ಕೆನಲಿದಿರ್ವಂದು ಕಾಲ್ಗೆಱಗಿ ನೀರೆಱೆಯೆಂದೊಡೆ ನೀಱೆ ಲೇಸುತೊ |
ಱ್ತನ ಮಗನೆಂದು ಬಾರಿಸಿದ ಕೈಗಳನಾಗಳೆ ಖಂಡಿಸುತ್ತುಮೇ |
ಶನ ಪರಿಜೆಂದು ಕಂಡವನೆ ನೀಱನಲಾ ಗಿರಿಮಲ್ಲಿಕಾರ್ಜುನಾ ||೮೭|

ಯದುಕುಲದಲ್ಲಿಪುಟ್ಟಿ ಪೊರೆಗುಂ ಧರೆಯುಂ ಧರಣೀಶನೆಂದೊಡಂ |
ಯದುಕುಲದಲ್ಲಿ ಕಂಸನೊಗೆದಂ ದುರುಳಂ ವಲಮೆಂದೊಡಂ ತ್ರಿಲೋ |
ಕದೆ ವಿದಿತಂ ಗುಣಂ ಕುಲದಿನಾಗದು ತದ್ಗುಣದಿಂ ಕುಲಂ ದಲಾ |
ಗದು ಕುಲದಿಂ ಗುಣಂ ಪಿರಿದು ಧಾರಿಣಿಯೊಳ್ ಗಿರಿಮಲ್ಲಿಕಾರ್ಜುನಾ ||೮೮

ರಸಮಂ ನಾಲಗೆಪೇೞ್ವುದುಳ್ಳಗುಣಮಂ ತಾನೊರ್ವನೇ ಪೇೞ್ವಮಾ |
ನಿಸನಿಲ್ಲಂ ತನಗಿಲ್ಲದಿರ್ದ್ದ ಗುಣಮಂ ಮತ್ತೊರ್ಬ್ಬನುಂಟೆಂದೊಡಂ |
ಪುಸಿ ಇರ್ದ್ದಂತುಟುಮಿಲ್ಲಮೆಂದೊರೆಯಲೆಂತುಂ ಸಾಲ್ವ ಸಾರಜ್ಞರಾ |
ರಸಮಂ ಸೋಸದನಾವನಣ್ಣ ಜಗದೊಳ್ ಶ್ರೀಶೈಲಮಲ್ಲೇಶ್ವರಾ ||೮

ಲವಲೇಶಂ ಶುಭಮಿಲ್ಲದಿರ್ದ್ದ ಪಲಕಾಲಂ ಪೋಪುದುಂ ಬೆನ್ನೊಳೆ |
ಯ್ದುವ ಸೌಭಾಗ್ಯವನೆಂತುಮೀಕ್ಷಿಸಿಯುಮಾದಂ ನಂಬದೇವೈಸಿ ಮಾ |
ನವನೆಂದುಂ ದೃಢಭಕ್ತಿಯಿಂ ಭವಪದಾಂಭೋಜಾತಸೇವಾವ್ರತ |
ಕ್ಕವಹಂಮಾಡದೆ ಬಾೞ್ವನಂ ಕರುಣಿಸಾ ಶ್ರೀಶೈಲಮಲ್ಲೇಶ್ವರಾ ||

ವಕ್ಕಣಿಸಲ್ಕೆ ಸಾಲದಿದು ಮಿಕ್ಕನೆಗೞ್ತೆಯ ಕಬ್ಬವಿಲ್ಲವೆಂ |
ದಕ್ಕರಿಗರ್ ಕೆಲರ್ ಪೆಱರ ಭಾಷೆಯೊಳಿರ್ದ್ದುದನಾಯ್ದು ಕನ್ನಡ |

ಕ್ಕಿಕ್ಕುವ ಕಬ್ಬಮುಂ ನುಡಿಯುವಮಾದರದಿಂ ತವೆ ತೀವೆ ನಾಡಿನೊಳ್ |
ಚೊಕ್ಕಳವಾಗಿ ಕೀರ್ತಿವಡೆಗುಂ ನುಡಿವೆಣ್ ಗಿರಿಮಲ್ಲಿಕಾರ್ಜುನಾ ||೯೧||

ಶರಣೆಂದಾನತನಾದವಂಗಭಯದಾನಂ ಮಾಡಿ ಕೈವೊಯ್ದು ಸ್ಕೈ |
ತಿರೆ ತಾನೆಕ್ಕಟಿಯೊಳ್ ಕಱುಂಬಿ ಪಗೆವಂ ತನ್ನಿಚ್ಛೆಯಿಂ ಕೊಲ್ವಿನಂ |
ನೆರವಾಗಿರ್ಪ್ಪ ಮಹಾತ್ಮರಿಂದೆ ಶಿಬಿಯುಂ ಮುಂಕಲ್ತನಾಗಿರ್ದ್ದೊಡು |
ರ್ವರೆಗರ್ಕೇಂದುಗಳಂದೆ ಬಂದೆಱಗರೇ ಶ್ರೀಶೈಲಮಲ್ಲೇಶ್ವರಾ ||೯೨||

ಷಡಭಿಜ್ಞಾಗಮದಂತೆ ಜೀವದಯೆಯುಂ ವಿಸ್ತಾರದಿಂ ಪೇೞ್ವ ಪೆ |
ರ್ಗಡೆ ತಾನೆಂದು ಜಗಜ್ಜನಂ ಪೊಗೞ್ವನಂ ಕೈವಾರದಿಂ ಸಾಱಿ ಕಾ |
ಡೊಡೆಯಂಗಂ ಸಲೆ ಕೊಕ್ಕರಿಕ್ಕೆಯೊಗೆವನ್ನಂ ಕೊಂದು ತಿಂದೆಯ್ದೆ ಬಾ |
ಯ್ಬಡಿವಂ ಧರ್ಮದೊಳೋ ಜನಣ್ಣ ಮಱುರೇ ಶ್ರೀಶೈಲಮಲ್ಲೇಶ್ವರಾ ||೯೩||

ಸವಿದು ಮರಂದಮಂ ಮಧುಕರಂ ಸೆಱೆವಿಡಿದು ಪದ್ಮದಲ್ಲಿ ಮಾ |
ನವನತಿಚಾರದೊಂದು ಸೊಬಗಿಂ ಮೊದಲೊಳ್ ಪಲವುಂ ದುರಾಕೃತ |
ಕ್ಕವಚಱಿದಿರ್ಮ್ಮನಲ್ ಬಗೆದಪಂ ಕಡೆಯೊಳ್ ಕಡೆಯಿಲ್ಲದಾಜವಂ |
ಜವದ ತೊಡರ್ಪಿನೊಳ್ ಸುಖಮನೆತ್ತಱಿವಂ ಗಿರಿಮಲ್ಲಿಕಾರ್ಜುನಾ ||೯೪||

ಹರಣಮೆ ಪೋದಬೇಗದೊಳಗುದ್ಧರಿಸಲ್ ನೆರೆವಣ್ಣನಾವನು |
ರ್ವರೆಯೊಳಗುಳ್ಳ ವಿನ್ನಣಮೆ ಸಾಲದೆ ಲೋಕಹಿತಾರ್ಥಕೆಂದು ಕೊ |
ಕ್ಕರಿಸದೆ ಜೀವಿಯಂ ಪಲತೆಱಂ ತಱಿದಲ್ಲದೆ ದೇಹಶಾಸ್ತ್ರದೊಳ್ |
ಪರಿಣತರಾಗರಿಂದಿನ ಕಲಾಕುಶಲರ್ ಗಿರಿಮಲ್ಲಿಕಾರ್ಜುನಾ ||೯೫||

ಒಳಗೊಂದಂ ಪೊಱಗೊಂದನೊಂದಿ ನುಡಿಯಿಂ ಚಾರಿತ್ರದಿಂ ಟಕ್ಕಿನಿಂ |
ದೊಳಗಂ ತೋಱಿಸದರ್ಥಸಾಧನೆಗೆ ತಕ್ಕಂತಣ್ಮಿ ತಾನೆಲ್ಲರೊಳ್ |
ಕೆಳೆಗೊಂಡಿರ್ದ್ದ ಗಭೀರನೆಂದು ನೆಗಳ್ವಂ ತನ್ನೊಂದೆ ದೇಹಕ್ಕದಾ |
ವಳವಿಂ ಕಟ್ಟಿದನಯ್ಯ ಜೀವವೆರಡಂ ಶ್ರೀಶೈಲಮಲ್ಲೇಶ್ವರಾ ||೯೬||

ಋಣಮಂ ತೀರಿಸಲಾಗಳೀಗಳೆನೆವೇಡಾರ್ಪಾಗಳೇ ತೀರ್ಚುಗಾ |
ಪೆಣನಂ ಪೊತ್ತಿರಲಾರ್ಪನೇ ಪಲವುಕಾಲಂ ಮಾನವಂ ತೀರ್ಚಲಾ |
ಋಣಮಂ ಮೂವಗೆ ದೇಶಕಾಲಸಮಯಪ್ರಖ್ಯಾತಭೇದಂಗಳಿಂ |
ಪಣವೊಂದೇ ಋಣವಲ್ಲವೆಂಬರೊವಜರ್ ಶ್ರೀಶೈಲಮಲ್ಲೇಶ್ವರಾ ||೯೭||

ಖೂವೆನೆ ಭೂಷಣಕ್ಕೆ ಬಡವಂಗೆ ಹಿಮುಕ್ಕೆ ವಿಷಾಹಿದೃಷ್ಟಿಗಂ |
ಭಾವಿಸೆ ಪದ್ಮಕಂ ಸಲಿಲಕಂ ಪೆಸರಾ ಞವೆನಲ್ಕೆ ನಿಗ್ಗವಂ |
ಞವೆನೆ ಪರ್ವತಕ್ಕೆ ನಯುನಕ್ಕಮರರ್ಗೆ ಶಿವಂಕರಂಗಮೆಂ |
ದಾವಗಮರ್ಥಮಾದಪುದು ಸಕ್ಕದದೊಳ್ ಗಿರಿಮಲ್ಲಿಕಾರ್ಜುನಾ ||೯೮||

ಊಟಳದಂತೆ ಸಂಸೃತಿ ತೆಱಂದಿರಿವಂ ಗಡ ಜೀವಿ ಸುತ್ತುವಾ |
ಕಾಟವನೆಲ್ಲರುಂ ತಿಳಿದುಮೇಕೆಯೊ ಸಿಲ್ಕಿ ನರಳ್ವುದೆನ್ನದಿ |
ಕರ್ಾಟವನಾಡಿ ನಾಡೆ ಭವಮುಂ ಬಿಡಲಾಟಿಸುವಂಗೆ ನಿನ್ನಕೊಂ |
ಡಾಟವೆ ಆಟವಲ್ತೆ ಪೆಱವಾಟಗಳೇಂ ಗಿರಿಮಲ್ಲಿಕಾರ್ಜುನಾ ||೯೯||

ಪೞಿಬರ ಮಾರ್ಗದೊಳ್ ನಡೆದು ಕಾವ್ಯಗುಣಂಗಳನಿಂತುಟೆಂದು ಕಂ |
ಗೞೀಗವಿ ಕೆಮ್ಮನೇಕೆ ಬರೆದಂ ಕೃತಿಯಂ ನುಡಿವೆಣ್ಣ ಕಣ್ಗಳಿಂ |
ಗೞಿಗೞಿನಯ್ಯೊ ನೀರ್ ಸುರಿವುದೆಂದೆನೆ ಪಂಡಿತಪುತ್ರರೇವೆನಾಂ |
ಪೞೀಗೆಡೆಯುಪ್ಪೊಡಿಂಕವಿತೆಗಾನೆಱಗೆಂ ಗಿರಿಮಲ್ಲಿಕಾರ್ಜುನಾ ||೧೦೦||

ಎನ್ನವರೆಲ್ಲರುಂ ನಲಿವಬೇಗದೊಳಲ್ಲಿಗೞಿತ್ತುಮೆಯ್ದಿದೆಂ |
ನಿನ್ನಯ ಮಂದಿರಕ್ಕೆ ಮಗುಳ್ದೆಯ್ದುವ ಬೇಗದೊಳೆಮ್ಮವಂದಿರುಂ |
ಬನ್ನಮನೊಂದಿಯುೞ್ವನೆಗಮಾಂ ನಲಿಯುತ್ತಮೆ ಬರ್ಪ್ಪಸ್ಸೈಪನೊ |
ಲ್ದೆನ್ನೊಳೆ ಮಾಡು ನಿತ್ಯಸುಖವಪ್ಪಿನೆಗಂ ಗಿರಿಮಲ್ಲಿಕಾರ್ಜುನಾ ||೧೦೧||

ಬಿನ್ನಣದಿಂದೆ ನೋಂತು ಪಲನೋಂಪಿಗಳಂ ಸಲೆ ಪೂಣ್ದೆನಲ್ಲೆನಾಂ |
ಮನ್ನಿಸಿ ನಿನ್ನವಂದಿರೊಳಗುಕ್ಕೆವದಿಂ ನೆರೆದಿರ್ದ್ದೆನಲ್ಲೆನಾಂ |
ಮುನ್ನಿನ ಸೈಪುಕೈಪೆಗಳನಾನಱಿಯೆಂ ಶರಣಾರುಮಿಲ್ಲ ನಾಂ |
ನಿನ್ನನೆ ನಂಬಿದೆಂ ಕರುಣಿಸಾದರದಿಂ ಗಿರಿಮಲ್ಲಿಕಾರ್ಜುನಾ ||೧೦೨||

ಚರಗುರುಲಿಂಗಪಾದ ಸರಸೀರುಹಸಾರಮರಂದಮತ್ತಷ |
ಟ್ಚರಣನಿಭಕ್ಕರ್ಗಳಂಘ್ರಿಕಮಳಂ ಬಗೆಯೊಳ್ ನಿಲೆ ನಿನ್ನವಂದಿರಂ |
ದೊರೆದ ಬೆಡಂಗಿಗಾನುಱದೆ ಯತ್ನಿಸಿದೆಂ ಪರಮಾರ್ಥಸಿದ್ಧಿಯುಂ |
ಕರುಣಿಸು ನಾಡೆ ನಿನ್ನಚರಣಂ ಶರಣಂ ಗಿರಿಮಲ್ಲಿಕಾರ್ಜುನಾ | ||೧೦೩||

ಶ್ರೀಶಂಕರಾರ್ಪಿತಮಸ್ತು.

ಟಿಪ್ಪಣಿ.

೧. ಓವಿ = ಪ್ರೀತಿಸಿ, ಹಿಮಾಂಶುವಿಂಗೆ = ಶೀತಕರಣವುಳ್ಳವನಿಗೆ ಎಂದರೆ ಚಂದ್ರನಿಗೆ, ದಿನಪಂಗೆ = ಸೂರ್ಯನಿಗೆ, ಪ್ರತಾಪಾವಳಿ = ತೀವ್ರವಾದ ಉರಿ, ಕೃಶಾನು = ಅಗ್ನಿ, ರಮಾಪತಿ = ವಿಷ್ಣು, ಇಂದಿರೆ = ಲಕ್ಷ್ಮಿ, ಲೋಕಾವನದೃಷ್ಟಿಯಿಂದೆ = ಸಕಲಲೋಕಸಂರಕ್ಷಣಾರ್ಥವಾಗಿ, ದಯೆಗೆಯ್ = ದಯೆಪಾಲಿಸು ಎಂದರೆ ಕೊಡು, ಕರಂ = ಅಧಿಕಾರ್ಥದ ಅವ್ಯಯ, ಪೊರೆಗೆ = ರಕ್ಷಿಸಲಿ, ಪಾಲಿಸಲಿ, ಆ = ಪ್ರಸಿದ್ಧಾರ್ಥ.

೨. ಕಾವ್ಯದಲ್ಲಿ ಚಮತ್ಕಾರವೂ ಗಂಭೀರವಾದ ಅರ್ಥವೂ ಸೇರುವುದಕ್ಕಾಗಿ ಪಾರ್ವತಿ, ಭಾರತಿ ಕವೀಂದ್ರತತಿಗಳಿಗೆ ನಮಸ್ಕರಿಸುತ್ತೇನೆ. ಪಂಪಾಶತಕವನ್ನೂ, ಶಿವಗಣಂಗಳ ರಗಳೆಯನ್ನೂ ಬರೆದ ಹರಿದೇವರಿಗೆ ಚಮತ್ಕಾರವಾದ ವಾಕ್ಕನ್ನು ಕೊಟ್ಟಂತೆ ನನಗೂ ದಯೆಪಾಲಿಸು. (ತಾನು ಮಗನೆಂದೂ ಪರಮೇಶ್ವರನು ತಂದೆಯೆಂದೂ ಇಲ್ಲಿ ಗ್ರಂಥಕಾರನು ತಾತ ವತ್ಸ ಶಬ್ದಗಳಿಂದ ತಿಳಿಸಿದ್ದಾನೆ.)

೩. ಮಮತೆ = ಅಹಂಕಾರ, ಒಂದಿ = ಕೂಡಿ, ಗುಡಿಗಟ್ಟಿಪೊಗಳ್ದು = ಧ್ವಜವನ್ನು ಕಟ್ಟಿ ಹೊಗಳಿ, ಗಡ = ಕಣಾ, (ಕಾಣ್ ಎಂಬ ಪದಗಳಂತೆ ಸಂಭಾಷಣೆಯಲ್ಲಿ ಪ್ರಯೋಗಿಸಲ್ಪಡುವುದು.) ಕೃತಿ = ಕಾವ್ಯ, ಉತ್ಕೃತಿ = ಮಹಾಕಾವ್ಯ, ಎಯ್ದೆ = ಅಧಿಕಾರ್ಥದ ಅವ ಯ, ಪೆರ್ಮೆ = ಹೆಮ್ಮೆ, ಎಣೆಯಲ್ಲರ್ = ಸಮಾನರಲ್ಲ, (ಅಲ್ಲ ಎಂಬುದಕ್ಕೆ ಅರ್, ಅಱ್, ಅಳ್, ಎನ್ ಎಂಬ ಪ್ರತ್ಯಯಗಳನ್ನು ಹತ್ತಿಸುವ ಪದ್ಧತಿ ಹಳಗನ್ನಡದಲ್ಲಿತ್ತು. ಈಗಲೂ ಈ ಪದ್ಧತಿ ತೆಲುಗಿನಲ್ಲಿ ಇದೆ.) ಪಳಿವರ್ = ನಿಂದಿಸುವರು, ದೂಷಣೆಮಾಡುವರು.

೪. ಮೈಮೆ = ಮಹಿಮೆ, ವಲಂ = ನಿಶ್ಚಯಾರ್ಥದ ಅವ್ಯಯ, ಒವಜರ್ — ಓಜರ್ = ಉಪಾಧ್ಯಾಯರು.

೫. ಸ್ತವನ = ಸ್ತೋತ್ರ, ಒಡರ್ಚು = ಮಾಡು, ನೆಗಲ್ಚಿ, ನೋಂತ = ವ್ರತವನ್ನು ಕೈಕೊಂಡ, ಅರಿದು ಅಲ್ತು = ಅಸಾಧ್ಯವಲ್ಲ. ಪರತ್ರ = ಪರಲೋಕ, ಪರಮಾರ್ಥ. ಇರತ್ರ = ಈ ಲೋಕದ ಸುಖದುಃಖಗಳು, ಅಸ್ತಮಿಪ ಐಹಿಕ ವ್ಯಸನ = ಶಾಶ್ವತವಲ್ಲದ ಈ ಲೋಕಸಂಬಂಧವಾದ ಆಸಕ್ತಿ, ಏಂ — ಪಿರಿದೇ ? = ದೊಡ್ಡದೇನು ?

೬. ಬಾರಿಸಿ = ತಡೆದು, ಮೌನಿವರ್ಯಸುತನಂ = ಮಾರ್ಕಂಡೇಯನನ್ನು ಎಂತುಂ ದಿವಿಜವ್ರಜಂ ನೆರೆದೊಡಂ = ಅನೇಕದೇವತೆಗಳುಕೂಡಿದ್ದರೂ, ಬಾಯ್ಕೇಳು = ಶರಣಾಗತನಾಗು, ಕಾದ್ಯೆ = ರಕ್ಷಿಸಿದ್ಯೆ, ಪೊಲ್ಲಮೆ = ದುಷ್ಟತನ, ಇದಿರ್ಚು = ವಿರೋಧಿಸು, ಒಳರೇ = ಇರುವರೇ ?

೭. ಒಗೆದತ್ತು = ಹುಟ್ಟಿತು, ಕೂರ್ಮೆ = ಸ್ನೇಹ, ವಿಶ್ವಾಸ, ಈಂಟು = ಕುಡಿ, ಮೆಱ್ = ವಿಡಂಬಿಸು. (ಇದನ್ನು ಸಕರ್ಮವಾಗಿ ಹಳಗನ್ನಡದಲ್ಲಿ ಪ್ರಯೋಗಿಸುವುದು.)

೮. ನಮಿತಸುರಾಳಿ = ದೇವೇಂದ್ರನೆಂದು ಇಲ್ಲಿ ಅರ್ಥ, ಈಂಗಡಲ್ = ಕ್ಷೀರಸಮುದ್ರ, ಇನಿದು + ಕಡಲ್ ಇಂಗಡಲ್, ಈಂಗಡಲ್, ಹೀಗೆಯೇ ಈಂಚರಂ, ಅಮರ್ದಂ = ಅಮೃತವನ್ನು, ಮುಡಿಯೊಳ್ ಆಂತೆ = ತಲೆಯಲ್ಲಿ ಧರಿಸಿದೆ. ಚಾಗ = ತ್ಯಾಗ.

೯. ಅಲ್ಕಱಿಂ = ಅಕ್ಕರೆಯಿಂದ, ಅಭವಾಂಘ್ರಿಗೆತ್ತು = ಪರಮೇಶ್ವರನ ಪಾದವೆಂದು ಭಾವಿಸಿ, ಉಱ್ = ಅಧಿಕವಾಗಿ, ತಱಿಸಂದ = ನಿಷ್ಕರ್ಷೆಮಾಡಿದ, ನಿರ್ಣಯಮಾಡಿಕೊಂಡ, ಮಡೆಯಂ = ಬುದ್ಧಿಹೀನ, ಮೂರ್ಖನಯಿನಾರರಕಥೆ:—ಮೂರ್ಖನೈನಾರರು, ಇವರು ಜೂಜಾಡಿ ಬಂದ ಹಣದಲ್ಲಿ ಜಂಗಮಾರಾಧನೆಯನ್ನು ಮಾಡುತ್ತಿದ್ದರು. ಒಂದು ಸಲ ಇವರನ್ನು ಪರೀಕ್ಷಿಸುವುದಕ್ಕೆ ಜೂಜಾಡುವವನಹಾಗೆ ಒಬ್ಬನು ಬಂದು ಸೋತುಹೋಗಲು ಹಣವನ್ನು ಕೊಡಬೇಕಾಯ್ತು. ಮೂರ್ಖನೈನಾರರಿಗೆ ಇಲ್ಲಿದೆ ಅಲ್ಲಿದೆ ಎಂದು ಹೇಳಿದುದನ್ನು ಕೇಳಿ ಕೋಪಬಂದು ಅವನ ಕಾಲನ್ನು ತಲೆಯ ಬಟ್ಟೆಯಿಂದ ಕಟ್ಟಿಬಿಟ್ಟರು ಬಳಿಕ ಶಿವಸೂತ್ರವನ್ನು ಕಂಡು ತಾನು ಮಾಡಿದ ಅಪರಾಧಕ್ಕೆ ತನ್ನ ತಲೆಯನ್ನು ಕಡಿವೆನೆಂದು ಕತ್ತಿಯನ್ನು ಎತ್ತಲು ಬಂದಾತನೇ ಪರಮೇಶ್ವರನಾದುದರಿಂದ ನಿಜರೂಪವನ್ನು ತೋರಿ ಕೈಲಾಸಕ್ಕೆ ಕರೆದುಕೊಂಡು ಹೋದನು. ದ್ಯೂತವು ಒಳ್ಳೆಯದಲ್ಲವಾದರೂ ಅದರಿಂದ ಬಂದ ಹಣವನ್ನು ಜಂಗಮಾರಾಧನೆಗೆ ಉಪಯೋಗಿಸಿದುದು ಪರಮೇಶ್ವರನಿಗೆ ಪ್ರೀತಿಯನ್ನುಂಟುಮಾಡಿತು.

೧೦. ತವದಂತೆ = ಕ್ಷೀಣವಾಗದಹಾಗೆ, ಇಂದೆ = ಈಗಲೆ (ಈ ದಿನದಲ್ಲಿಯೆ) ಭರದಿಂ = ಬೇಗನೆ.

೧೧. ಮುತ್ತಕ್ಕಳ್ = ವಯೋಧಿಕರು, ಮುಳಿಸು = ಕೋಪ, ವೃಥಾಲಾಪಕಾಹ್ಲಾದಂಗೊಳ್ಳದಿರು = ಟೊಳ್ಳುಹರಟೆಯಲ್ಲಿ ಆನಂದವನ್ನು ಹೊಂದಬೇಡ, ನೀಡುಂ = ನಾಡೆ, ಅಧಿಕಾರ್ಥದ ಅನ್ವಯ, ಹಿಂಸಾದಾನಂ—

ಪರಶು ಕೃಪಾಣ ಖನಿತ್ರ |
ಜ್ವಲನಾಯುಧ ಶೃಂಗಿ ಶೃಂಖಲಾದೀನಾಂ ||
ವಧ ಹೇತೂನಾಂ ದಾನಂ |
ಹಿಂಸಾದಾನಂ ಬ್ರುವಂತಿಬುಧಾಃ ||

೧೨. ಆಯತಿ = ಸಾಮರ್ಥ್ಯ, ಸಲೆ = ಸಲುತ್ತಿರಲು, ಜೋಹ = ವೇಷ. ಚಿತ್ಸುಖಾರತಯತಿಗಳ್ = ಚಿದಾನಂದದಲ್ಲಿ ಆಸಕ್ತರಾದ ಯತಿಗಳು, ಭಿಕ್ಷಾಟನಚರಿತ್ರೆ.

೧೩. ಪರಾಭವ = ಅಪಮಾನ, ಪರದ = ವರ್ತಕ, ಈಡಾಡು = ತ್ಯಜಿಸು, ಎಱಚಿಬಿಡುವುದು.

೧೪. ಬಿಲ್ತ = ವಿಕ್ರಯಿಸಿದ, ಮಾರಿದ, ಸಲೆ = ಚೆನ್ನಾಗಿ, ಸಾಲ್ಗುವ:ಲ್ತೆ ಬಯಲುಂಬಱನುಂ = ಜೀವನಕ್ಕೆ ಧನವು ಸಾಲದೆ ಸತ್ತುಹೋಗುವನೆಂದು ಅಭಿಪ್ರಾಯ, ಬಱಂ = ಕ್ಷಾಮ, ಬಯಲ್ = ಆಕಾಶ.

೧೫. ವಿನ್ನಣದಿಂ = ಚಮತ್ಕಾರದಿಂದ, ನಡೆನೋಡಿ = ಚೆನ್ನಾಗಿ ನೋಡಿ, ಕೆಮ್ಮನೆ = ಸುಮ್ಮನೆ, ಗಣಿದ = ಲೆಕ್ಕ, ನೆರವು = ಸಹಾಯ.

೧೬. ಶಿಕ್ಷೆಗೆ = ಕಲಿಸುವುದಕ್ಕೆ, ಪಸುಳೆಯರ್ = ಹುಡುಗರು, ತಳಾಱರ್ = ತಳವಾರರು, ನಾಡು = ದೇಶ.

೧೭. ಬಡಬಂಗೆ = ದ್ವಿಜನಿಗೆ, ಬಿಜ್ಜೆ = ವಿದ್ಯೆ, ಒಡಲ್ = ದೇಹ, ಶರೀರ, ಪಱಿದು = ಕಿತ್ತುಹಾಕಿ, ಆರಯೆ = ಆಲೋಚಿಸಿದರೆ, ಕೆಲಸಿಗಂ = ಕ್ಷೌರಕ, ಬಯಿಗ್ಗನಬೇಗದೊಳ್ = ಸಂಜೆಯ ಹೊತ್ತಿಗೆ.

೧೮. ಬಿದ್ದರ್ = ಔತಣ, ಓಗಡಿಸು = ಓಕರಿಸು, ವಾಂತಿಮಾಡು. ನೆಲೆವನೆ = ಆಶ್ರಯ ಸ್ಥಾನ, ಮುಡಿಪುಗುಂ = ಸಾಯುವನು.

೧೯. ಓರನ್ನರ್ = ಒಂದೇ ಸಮನಾಗಿರುವವರು. ನೋೞ್ಪಂ = ನೋಡುಗುಂ, (ಅ, ಉ, ಮ—ಎಂಬೀ ಮೂರರಿಂದ ಓಂಕಾರವಾಯ್ತೆಂದೂ ಓಂಕಾರಕ್ಕಾದಿಯಲ್ಲಿ ವಿಷ್ಣು, ಮಧ್ಯದಲ್ಲಿ ಬ್ರಹ್ಮ, ಅಂತ್ಯದಲ್ಲಿ ಶಿವನೆಂದೂ ಹೇಳುವರು.)

೨೦. ನಱುಗಂಪಂ = ಒಳ್ಳೆಯ ಪರಿಮಳವನ್ನು, (ನಱುಮಲರ್—ನಱುನೆಯ್) ಚಂದನ ಕ್ಷ್ಮಾಜ = ಗಂಧದಮರ, ಕನ್ನಡಿಸುವ = ಕನ್ನಡಿಯಂತೆ ತೋರುವ, ಒಂದು ಅೞ್ಕಱಿಂ ಆಳ್ಗಂ = ಒಂದುಬಗೆಯ ವಿಶ್ವಾಸದಿಂದ ಕೂಡಿರುವುದೆಂದರ್ಥ. ಆಳ್ = ತಳಿ ಎಂಬರ್ಥಕ್ಕೆ,—

"ಚರಯಿಸ ವನಸೇವತೆಯರ ಚರಣಾಲಕ್ತದೆ ಪೊರೆದುವೆನಿಸಿದುವು ಮಧುವಿಂದುಱಿ ? ಸೊಕ್ಕಿ ಳನಾಳ್ದ ಕೇರಳಿಯರ ಕದಪಿನ ಬಣ್ಣವಪ್ಪ ಚೆಂದಳಿರ್ದುಱುಗಲ್." (ಕಾದಂಬರಿ)

ಸುಶ್ರಾವ್ಯವೆಂಬನ್ನಂ = ಕೇಳುವುದಕ್ಕೆ ಬಹಳ ಇಂಪಾಗಿರುವಹಾಗೆ, ಕಮ್ಮಿತು = ಮಧುರ, ಇಂತಱಿಂ = ಹೀಗಿರುವುದರಿಂದ, ಇನ್ = ಇನ್ನು.

(ಕೆಲವರು ಕನ್ನಡವೆಂಬ ಶಬ್ದವು "ಕಪ್ಪುನಾಡು" ಎಂಬ ಪದಗಳಿಂದ ಬಂದಿತೆಂದು ಹೇಳುವರು. ಅದನ್ನು ಅಂಗೀಕರಿಸದೆ ಈ ಗ್ರಂಥಕಾರನು ಕನ್ನಡದಲ್ಲಿ ಕಪ್ಪು ಹೇಗೆಬಂದಿತೆಂದು ಕೇಳುತ್ತಾನೆ.)

೨೧. ನಿಱಿಸಿ = ಸ್ಥಾಪನೆಮಾಡಿ, ನಿಲ್ಲಿಸಿ, ಧಾರಾಪೂರ್ವಕಂ = ಧಾರೆಯೆಱೆದಂತೆ ಎಂದರೆ ಪ್ರತಿಜ್ಞಾಪೂರ್ವಕವಾಗಿ, ದೇಹದಂಡನೆಯ = ಶರೀರಕಷ್ಟವನ್ನು, ಲೆಕ್ಕಿಸದೆ = ಲಕ್ಷ್ಯವಿಡದೆ, ಬಗೆಯದೆ, ದೇಸಿಗ = ಪರದೇಶಿ, ವಿರಕ್ತ, ವೀರಮಾಮುನಿಪಂ [ಕ್ರಿ. ವ. 1680-1746. ಇವನು ಸೊಸೈಟಿ ಆವ್ ಜೀಸಸ್ ಎಂಬ ಕ್ರಿಸ್ತಸಂಘಕ್ಕೆ 1698 ರಲ್ಲಿ ಸೇರಿದನು. 1708 ಗೋಆ ಎಂಬ ಪಟ್ಟಣಕ್ಕೆ ಬಂದನು. ತಿರುನೆಲ್ವೇಲಿ ಜಿಲ್ಲೆಯಲ್ಲಿ ಪಾದರಿಯ ಕೆಲಸದಲ್ಲಿ ಪ್ರವರ್ತಿಸಿ ವಡಕಂಗುಳಂ ತಮ್ಮನಾಯಕಂಬಟ್ಟಿಯೆಂಬ ಊರುಗಳಲ್ಲಿ ಬಹು ಪ್ರಸಿದ್ಧನಾದನು. ನಮ್ಮ ದೇಶದ ಸಾಧುಗಳಂತೆ ತಲೆಗೆ ರುಮಾಲನ್ನು ಸುತ್ತಿ, ಕಾಲಿಗೆ ಪಾದುಕೆಯನ್ನು ಮೆಟ್ಟಿ, ಕೈಯಲ್ಲಿ ದಂಡವನ್ನು ಹಿಡಿದು, ಪಲ್ಲಕ್ಕಿಯಲ್ಲಿ ಸಂಚರಿಸಿ, ವ್ಯಾಘ್ರಾಜಿನದಮೇಲೆ ಕುಳಿತು ಕ್ರೈಸ್ತರಲ್ಲದವರನ್ನು ಪರಿವಾರವಾಗಿ ಮಾಡಿಕೊಂಡಿದ್ದನು. ತಮಿಳುಭಾಷೆಯನ್ನು ಚೆನ್ನಾಗಿ ಕಲ್ತು ತೆಂಬವಣಿ ಎಂಬ ಕಾವ್ಯವನ್ನು ಬರೆದನು. ಇದು ಪ್ರಸಿದ್ಧವಾಗಿರುವ ಜೀವಕಚಿಂತಾಮಣಿಯೆಂಬ ಜೈನಕಾವ್ಯದಷ್ಟು ಪ್ರೌಢವಾದ ಕಾವ್ಯವೆಂದು ತಮಿಳುಬಲ್ಲವರು ಹೇಳುವರು. ಇದಕ್ಕೆ ವ್ಯಾಖ್ಯಾನವನ್ನೂ ಬರೆದನು ಆಮೇಲೆ ಕೆಲವು ನಿಘಂಟುಗಳನ್ನೂ ವ್ಯಾಕರಣಗಳನ್ನೂ ರಚಿಯಿಸಿದನು. ಇಂಗ್ಲೀಷು ನಿಘಂಟುಗಳ ರೀತಿಯಲ್ಲಿ ಬರೆದವುಗಳೊಳಗೆ ಈತನು ಬರೆದ ಚತುರ ಅಕರಾದಿ ಎಂಬ ತಮಿಳ ನಿಘಂಟುವೇ ಮೊದಲನೆಯದು. ಚೆಂದಮಿಳ್ ಕೊಡುಂದಮಿಳ್ ಎಂಬ ವ್ಯಾಕರಣ ಗ್ರಂಥಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದನು. ತೊನ್ನೂಲ್‌ವಿಳಕ್ಕಂ ಎಂಬ ತಮಿಳುವ್ಯಾಕರಣವೂ ಇವನು ಬರೆದುದೇ. ಅವಿವೇಕಪೂರ್ಣ ಗುರುಕಥೆ ಎಂಬ ಹಾಸ್ಯಗ್ರಂಥ

ವನ್ನೂ ಬರೆದಿದ್ದಾನೆ. ಚಂದಾಸಾಹೇಬನಿಗೆ ಕೆಲವುಕಾಲ ಈತನು ದಿವಾನನಾಗಿದ್ದನು ಮರಾಠಿಯವರು ತಿರುಚಿನಾಪಳ್ಳಿಗೆ ದಂಡೆತ್ತಿ ಬಂದಾಗ ರಾಮನಾಡಿಗೆ ಓಡಿಹೋಗಿ, ಅಲ್ಲಿಂದ ಮಣಪ್ಪಾರ್ ಎಂಬೂರಿಗೆ ಹೋಗಿ ಅಲ್ಲಿ 1746 ಕ್ಕೆ ಕಾಲವಾದನು. ಈತನಿಗೆ ಧೈರ್ಯಸ್ವಾಮಿ, ಇಸ್ಮತಿಸನ್ಯಾಸಿ ಎಂಬ ಹೆಸರುಗಳಿದ್ದುವು. ಯೂರೋಪಿನಿಂದ ಬರುವಾಗ ಇವನ ಹೆಸರು ಬೆಸ್ಕಿ ಎಂದಿತ್ತು.]

೨೨. ಕೈಮೆ = ಸಾಹಸ, ನೆಗಳ್ದ = ಪ್ರಸಿದ್ಧವಾದ, ಈ ನೆಲನುಳ್ಳನ್ನೆವರಂ = ಈ ಭೂಮಿಯಿರುವವರೆಗೂ.

೨೩. ಮುನ್ನೀರ್ = ಸಮುದ್ರ, ಎತ್ತಣಿಂ = ಎಲ್ಲಿಂದ, ಪಾರುವಂ = ಕುದುರೆ.

೨೪. ಮಾಱ್ಕೆ = ಮಾಡುಗೆ, ಮಾಡಲಿ, ಎರ್ದೆಗೆಟ್ಟು = ಧೈರ್ಯಗೆಟ್ಟು, ಗೆಲ್ಲಸೋಲ = ಜಯ—ಅಪಜಯ, ಅಣ್ಮಿ = ಸಾಹಸಪಟ್ಟು.

೨೫. ಓಲಯಿಪರ್ = ಆಶ್ರಯಿಸುವರು. ಲೋಕಹಿತೇಚ್ಛು = ಲೋಕದ ಹಿತವನ್ನು ಬಯಸುವವನು, ಪುದುಂಗೊಳಿಸು = ಎಲ್ಲರಿಗೂ ಅನುಕೂಲವಾಗುವಂತೆ ಮಾಡು.

೨೬. ಪಿರಿಯರೆಮ್ = ನಾವು ದೊಡ್ಡವರು, ಹೀಗೆ ಎಮ್, ಎೞ—ಎಂಬ ಪ್ರತ್ಯಯಗಳನ್ನು ಹಳಗನ್ನಡದಲ್ಲಿ ಹತ್ತಿಸುವುದುಂಟು. ಜೀವವಧೆಗೆಯ್ದು = ಪ್ರಾಣಹಿಂಸೆಯನ್ನು ಮಾಡಿ, ಅಡಗು = ಮಾಂಸ, ಇಱಿಕೆಯ್ದು = ತಿರಸ್ಕರಿಸಿ, ಕಳ್ಳೞ + ಉಣಲ್ + ಆಟಿಪರ್ + ಇನ್ನರೆ = ಹೆಂಡವನ್ನು ಕುಡಿಯುವುದಕ್ಕೆ ಇಚ್ಛೈಸುವರು ಇಂಥವರೆ, ಪೊಲೆಯರ್ ಪೆಱವರ್ = ಹೊಲೆಯರೆಂಬವರು ಇವರಲ್ಲ ಅವರು ಬೇರೆ.

೨೭. ಗಣಿಯಿಸಲ್ನೆರೆವ = ಲೆಕ್ಕವಿಡುವುದಕ್ಕೆ ಸಮರ್ಥರಾಗಿರುವ.

೨೮. ತವೆ = ಅಧಿಕವಾಗಿ, ತಲೆನೋಡಲ್ ನೋಡಿಮೆಚ್ಚಲ್ ಮನದೊಳಕದಳಂ ಮೆಚ್ಚಿ ನಾನಾವಿಶೇಷಸ್ತವದಿಂದಂ ಕೀರ್ತಿಸಲ್ (A. L. V. 100).

೨೯. ಎಕ್ಕಟಿಯೊಳ್ = ಏಕಾಂತದಲ್ಲಿ, ಒರ್ಮೆ, ಪಲರ್ಮೆ = ಒಂದುಸಾರಿ, ಹಲವುಸಾರಿ, ಲೋಗರ್ = ಜನರು (ಇತರ ಜನರು) ಪಾರಯಿಸು = ಹಾರೈಸು.

೩೦. ಯವನರ್ = ಈ ಶಬ್ದವನ್ನು ಈ ನಮ್ಮ ದೇಶದವರು ಮ್ಲೇಚ್ಛರಿಗೂ, ತುರುಷ್ಕರಿಗೂ, ಐಯೋನಿನ್ ಜನರಿಗೂ, ಗ್ರೀಕರಿಗೂ ಹೇಳುವುದುಂಟು. ಇಲ್ಲಿ ನಮ್ಮ ದೇಶದವರಲ್ಲದವರು ಎಂದರ್ಥ. ಅವಗೆಯಿಂದೆ = ಆ ರೀತಿಯಲ್ಲಿ, ಅಱಂ = ಧರ್ಮ, ಪೆಱತೇಂ = ಇನ್ನೇನು.

೩೧. ಓಮನೆ ಟೋಮೆನಲ್ ನೆರೆಯದಾತನುಂ = ಏನೂ ತಿಳಿಯದವನೂ, ವಿಗುರ್ವಿಸು = ಭಯಪಡಿಸು.

(ಸಿಡಿಲ್ಪೊಡೆನಂತೆ ಸುತ್ತಲುಂ ವಾರಿಧಿಮೇರೆದಪ್ಪಿ ಕವಿವಂತೆ ವಿಗುರ್ವಿಸಿದಂ ದಶಾನನಂ. ಪ. ರಾ. IX. 186) ದಿಮ್ಮಿದಂ = ಪ್ರೌಢ.

೩೨. ಪಿತ್ತಿಲ್ = ಪಿಂತು + ಇಲ್, ಮನೆಯ ಹಿಂದಣಭಾಗ.

೩೩. ಒಳದು = ಉಂಟು, ಸಾಸ = ಸಾಹಸ, ಪರ್ದೞ + ಅಲ್ತು + ಅಱನುಂ = ಒಂದಿಷ್ಟಾದರೂ ಸಾಹಸವಿಲ್ಲದವನಿಗೆ ಧರ್ಮವೂ ಹಡನಾಗಿರುವುದಿಲ್ಲ.

೩೪. ಅವಲೋಹ = ಕೆಟ್ಟಲೋಹ, (ಇದನ್ನು ಒಳ್ಳೆ ಬೆಳ್ಳಿ ಭಂಗಾರಗಳಿಗೆ ಪ್ರತಿಯಾಗಿ ಬೆರಸಿ ಮೋಸಗೊಳಿಸುವರು.)

೩೫. ಓಜೆ = ಸೊಗಸು, ರೀತಿ, ಪಿಸುಣ್ + ನುಡಿ = ಚಾಡಿಯಮಾತು, ಗೆಲಲಾರ್ಪ = ಗೆಲ್ಲುವಸಾಮರ್ಥ್ಯವುಳ್ಳ, ಎಯ್ದಿ = ಸಮೀಪಕ್ಕೆ ಹೋಗಿ, ಬಂದಿಸಿ = ವಂದಿಸಿ.

೩೬. ತನುರ್ = ತನರ್ನನೆ, ಒಪ್ಪಿಕೊಳ್ = ಕೂಡಿಹಾಕು, ಅನುರ್ವ = ಒದಗುವ, ಕನರ್ತೆ = ಬಲಾತ್ಕಾರದಿಂದ ಎಳೆದುಕೊಳ್ಳುವುದು, ತೆವುಳ್ದು = ರಾಶಿಹಾಕು.

೩೭. ಬೇಳ್ಪ = ಬೇಡುವ, ಅಲ್ಪ್ರಿಯಿಂ = ಪ್ರೀತಿಯಿಂದ, ಇಮ್ಮನೆಜೀವಿಸಲ್ಕೆ = ಸುಖವಾಗಿ ಬಾಳುವುದಕ್ಕೆ.

೩೮. ನೆರನಂ ನೆರವಾರ್ಗೆ = ಸಹಾಯವನ್ನು ತೋರಲಿ.

೩೯. ಮುನ್ನೆಸಗಿದ = ಪೂರ್ವದಲ್ಲಿ ಮಾಡಿದ, ಏತಱಕುಂದು = ಎಂಥಕುಂದು, ಸಮನಿಕುಂ = ಒದಗುವುದು, ಸಂಭವಿಸುವುದು.

೪೦. ಸಯೆ = ಸಾಯಲು, ನರರಪೊತ್ತಿವಿಮಾನವಂ = ಜನರು ಹೊತ್ತಿದ್ದ ಸಿವಿಗೆಯನ್ನು, ತವಸಿ = ತಪಸ್ವಿ, ಚವುಡರಸರು = ಚೌಡರಸರು, (ಇವರು ಮುಸುಟೆಯೆಂಬೂರಲ್ಲಿದ್ದರು. ಇವರು ಹೋಗುವ ದಾರಿಯಲ್ಲಿ ಗೂಳಿ ತಪಸ್ವಿಭಕ್ತರು ಯಾರು ಮಡಿದರೂ ಆಗಲೇ ಪ್ರಾಣವನ್ನು ಕೊಟ್ಟು ಉದ್ಧರಿಸುವುದು ಇವರ ಪ್ರತಿಜ್ಞೆ, ದಾರಿಯಲ್ಲಿ ನದಿ ಮೊದಲಾದುವು ಅಡ್ಡಬಂದರೂ ತಡೆದು ದಾರಿಯನ್ನು ಬಿಡಿಸಿಕೊಂಡು ಹೋಗುತ್ತಿದ್ದರು. ಬಸವರಸನ ಪ್ರಭಾವವನ್ನು ಕರ್ಣಾಕರ್ಣಿಕೆಯಿಂದ ತಿಳಿದು ಕಲ್ಯಾಣಪುರಕ್ಕೆ ಹೋಗಬೇಕೆಂಬ ಕುತೂಹಲವು ಹುಟ್ಟಿ, ಮಾಹೇಶ್ವರರ ಜೊತೆಯಲ್ಲಿ ಬರುತ್ತಿರಲು ದಾರಿಯಲ್ಲಿ ಇಟ್ಟಿಯ ಹಣ್ಣುಗಳನ್ನು ತಿನ್ನಬೇಕೆಂದು ಅವರು ಬಯಸಿದರು. ಆಗ ಮರದ ಬಳಿಗೆ ಬಂದು ಖಡ್ಗವನ್ನು ನೆಲದಲ್ಲಿ ಊರಿ ನಿಂತು ಆರೋಗಿಸಬಹುದು—ಎಂದು ಚೌಂಡರಸರು ಹೇಳಲು, ಅವರೆಲ್ಲರೂ ತಿಂದು ತೃಪ್ತರಾದರು. ಒಂದು ದಿನ ಕಲ್ಯಾಣಪುರದಿಂದ ಇವರು ಮತ್ತೊಂದು ಕಡೆ ಮದುವೆಗೆಂದು ಹೊರಟಾಗ ದಾರಿಯಲ್ಲಿ ಒಬ್ಬ ಸತ್ತತಾಪಸನ ಹೆಣವನ್ನು ಹೊತ್ತು ಜನರು ಬರುತ್ತಿದ್ದುದನ್ನು ಕಂಡು ತಾಪಸನನ್ನು ಬದುಕಿಸಿ ಕರೆದುಕೊಂಡು ಹೋದರು. ಹೋಗುತ್ತ ಒಂದು ಆಲದಮರದ ಬಳಿಯಲ್ಲಿ ಕೆಲವರು ಹುಡುಗರು ಆ "ಬಸವನಾಲವೇ ನಮಗೆ ಆಜ್ಜ" ಎಂದು ಹೇಳಿ ಆಡುತ್ತಿರುವುದನ್ನು ಕೇಳಿ, ಅವರಲ್ಲಿ ಒಬ್ಬನನ್ನು ಕರೆದು ಇದಕ್ಕೆ ಆ ಬಸವನಾಲವೆಂದೇಕೆ ಹೆಸರು ಬಂದಿತೆಂದು ಹೇಳಿದರು. ಅದಕ್ಕೆ ಅವನು "ಒಂದಾನೊಂದು ಕಾಲದಲ್ಲಿ ಎರಡು ಗೂಳಿಗಳು ಹೋರಾಡಿ, ಅವುಗಳಲ್ಲಿ ಒಂದನ್ನು ಒಂದು ಕೊಂದುಹಾಕಲು, ಸತ್ತ ಗೂಳಿಯನ್ನು ಹೂಳಿದಕಡೆ ಆಲದಮರವು ಹುಟ್ಟಿತು. ಅಂದಿನಿಂದ ಇದಕ್ಕೆ ಆಲದಮರವೆಂದು ಹೆಸರು. ಇದರ ಹಣ್ಣನ್ನು ಒಡೆದರೆ ರಕ್ತಮಾಂಸವೇ ತೋರುವುದು. ಈ ಮರದಲ್ಲಿ ಎಲ್ಲಿಯಾದರೂ ಪೆಟ್ಟುತಗಲಿದರೆ ರಕ್ತವು ಸುರಿಯುವುದು" ಎಂದು ಹೇಳಿದನು. ಇದನ್ನು ಕೇಳಿದೊಡನೆಯೇ ಖಡ್ಗವನ್ನು ಆಲದಮರದಲ್ಲಿ ಚುಚ್ಚಲು, ಸತ್ತುಹೋಗಿದ್ದ ಗೂಳಿ ಎದ್ದುಬಂದಿತು. ಇನ್ನೂ ಮುಂದೆ ಹೋಗುತ್ತಿರಲು ಒಂದು ದೊಡ್ಡ ಹೊಳೆ ಅತ್ಯಾರ್ಭಟದಿಂದ ದಾರಿಯನ್ನು ಕಟ್ಟಿರಲು, ಕತ್ತಿಯನ್ನು ಒರೆಯಿಂದ ಕಿತ್ತಕೂಡಲೇ ನದಿಯು ತಾಯ್ಮಳಲನ್ನು ತೋರಿಸಿ ಒಂದು ದೆಸೆಗೆ ಸರಿಯಿತು. ಇಂಥ ಮಹಾತ್ಮರೆಂದು ಕಲ್ಯಾಣಪುರ

ದಲ್ಲಿ ಕೀರ್ತಿವಂತರಾಗಿದ್ದವರಿಗೆ ಯಾರು ತಾನೇ ಕಾಲ್ಗೆರಗರು ? ಒಂದು ದಿನ ಒಬ್ಬ ಹೆಂಗಸು ಇವರಿಗೆ ನಮಸ್ಕಾರಮಾಡಿದೊಡನೆ ದೀರ್ಘಾಯುವೆಂದು ಹರಸಿದರು. ಮರುದಿನ ಅವಳು ಸತ್ತುಹೋದಳೆಂದು ಅಳುತ್ತ ಆವಳ ತಾಯಿತಂದೆಗಳು ಬಂದು ಇವರನ್ನು ಪ್ರಾರ್ಥಿಸಿ ತಮ್ಮಂಥವರ ಮಾತು ಎಂದಾದರೂ ಸುಳ್ಳಾಗುವುದುಂಟೆ? ಎನ್ನಲು ಸಿವಿಗೆಯನ್ನು ಇಳಿಸಿದಕೂಡಲೇ ಸತ್ತಿದ್ದ ಹೆಂಗಸನ್ನು ಎಬ್ಬಿಸಿ ಹರಸಿದರು. ಇವರ ಸದ್ಗುಣವನ್ನು ಸಹಿಸಲಾರದೆ ಕೆಲವರು ಪಟಿಂಗರು ಇವರನ್ನು ಪರೀಕ್ಷೆ ಮಾಡುವುದಕ್ಕೆ ಒಂದು ಮಾಯಾಪ್ರೇತವನ್ನು ಗೋಣಿಚೀಲ ಹರಕುಬಟ್ಟೆ ಹುಲ್ಲುಕಡ್ಡಿಗಳಿಂದ ನಿರ್ಮಿಸಿ ಸತ್ತತಪಸ್ವಿ ಎಂದು ಹೊತ್ತುಕೊಂಡು ಬರುತ್ತಿದ್ದುದನ್ನು ನೋಡಿ, ಅದರೊಳಗೆ ತಮ್ಮ ಜೀವಕಳೆಯನ್ನು ಕಳುಹಿ, ಅಲ್ಲಿಂದ ತಪಸ್ವಿ ನಿಜವಾಗಿಯೂ ಎದ್ದುಬರುವಂತೆ ಮಾಡಿದರು. ಕುಹಕರು ನಾಚಿಕೊಂಡು ಕಾಲ್ಗೆರಗಿ ಅಭಯವನ್ನು ಬೇಡಿ ಶರಣಾಗತರಾದರು).

೪೧. ಮಾತಿ = ಹನುಮಂತ, ಪಿಂಬಡಿನೊಳ್ + ಎಯ್ದುವ = ಅನುಸರಿಸಿಬರುವ, ನೀಱೆ = ಹೆಂಗಸು, ಓತು = ಪ್ರೀತಿಸಿ, ಕುಲಂಗಳಂ = ಎರಡು ಕುಲಗಳನ್ನೂ, ಜಸ = ಯಶಸ್ಸು, ಕೀರ್ತಿ, [ಕೀರ್ತಿಬೆಳ್ಳಗಿರುವುದೆಂದು ಕವಿಸಮಯ,] ಭಾರತೀಯಂ = ಇಂಡಿಯಾದೇಶದವನು, ಸಲ್ಗೆ = ಸಲ್ಲಲಿ.

೪೨. ಪ್ರತ್ನ + ನೂತ್ನ, ಪೞಮಾತು = ವೇದ.

೪೩ ಓಲಗಸಾಲೆ = ಸಭಾಮಂಟಪ, ಪೆರ್ಗಡೆ = ಮುಖ್ಯಸ್ಥ, ಬೆಸಕೆಯ್ವಂ = ಹೇಳಿದಂತೆ ಮಾಡುವೆವು. ಠವಣೆ = ಲೆಕ್ಕ.

೪೪. ಒಳಕೆಯ್ದಿರೆ = ಅಡಗಿರಲು, ಬಚ್ಚಿಟ್ಟಿರಲು, ಕೈತವ = ಮೋಸ, ಉಱವೆ = ಕೈಯುಲ್ಲಾಗದೆ, ತೆಗೞ್ದೊಡೆ = ಬಯ್ಯಲು, ಬಿನ್ನನೆ = ಮಾತನಾಡದೆ, ಮೌನವಾಗಿ.

೪೫. ಒಕ್ಕಲ್ = ಗುಂಪು, ತಂಡ, ಕೂಟ, ಪೆಣ್ಬಡೆ = ಹೆಂಗಸರ ಗುಂಪು, ಸಲ್ವೊಡೆಪದನ್ ಅಲ್ಲದಂಗೆ ಅಭವನಿನ್ನಪದಂ—ಎಂದನ್ವಯ.

೪೬. ಅರ್ಥಹೀನಪಟ್ಟ = ಸಾಲವನ್ನು ತೆಗೆದುಕೊಂಡು ತೀರಿಸುವುದಕ್ಕೆ ಇಷ್ಟವಿಲ್ಲದಿರುವವರಿಗೆ ಇದೊಂದು ಉಪಾಯ.

೪೭. ವಾಗುರೆ = ಬೇಂಟೆಯು ಮೃಗಗಳನ್ನು ಹಿಡಿಯುವುದಕ್ಕೆ ಬೀಸುವ ಬಲೆ ಉೞ್ = ಅಧಿಕಾರ್ಥದ ಅನ್ವಯ.

೪೮. ಮೋದು = ಬಡಿ, ಆಜ್ಞೋಲ್ಲಂಘನಂಗೆಯ್ದು = ಆಜ್ಞೆಯನ್ನು ಮೀರಿ, ಅತಿ ಕರ್ಕಶರ್ ಕ್ರೂರರು, ಕಾಳ = ಕತ್ತಲೆ, ಅಯಶಂ = ಅಪಕೀರ್ತಿ, ಆದಂ = ಅಧಿಕಾರ್ಥದ ಅನ್ವಯ.

೪೯. ಅಕ್ಷರ = ಶಾಶ್ವತ, ಅನಂತ, ಅಕ್ಷಯ.

೫೦. ಅಲಂಪು = ವೈಭವ, ಪ್ರೀತಿ, ಮಱುವೆಯ್ = ಪುನರ್ಜನ್ಮ, ಬಿಜ್ಜಳೆ = ಅಮ್ಮವ್ವೆ, (ತಾಯಿಲ್ಲದೆ ಅಧಿಕವಾಗಿ ಬಳಲಿ ಪರದೇಶಿಯಂತಿರುವ ಶಿವನಿಗೆ ತಾನು ತಾಯಾಗುವೆನೆಂದು ಭಾವಿಸಿ ತಾಯಂತಾಗಲು ಪರಮೇಶ್ವರನು ಇವಳ ಉಪಚಾರ ಲಾಲನೆಗಳನ್ನೆಲ್ಲ ಅಂಗೀಕರಿಸಿದರೂ, ಊಟಮಾಡದೆ ಇದ್ದುದಕ್ಕೆ ಹಂಬಲಿಸಿ ಕೊನೆಗೆ ಸಾಯುವೆನೆಂದು ಶಿರವನ್ನು ಕತ್ತರಿಸಿಕೊಳ್ಳುವವೇಳೆಗೆ ಮಹೇಶ್ವರನು ಇವಳ ವಿಶ್ವಾಸಕ್ಕೆ ಮೆಚ್ಚಿ ಪ್ರತ್ಯಕ್ಷನಾಗಿ ನಿತ್ಯತ್ವವನ್ನು ಕೊಟ್ಟನು.) ಸೆಟ್ಟಿಗೆ = ಸಿರಿ

ಯಾಳಸೆಟ್ಟಿಗೆ, (ಈ ಸಿರಿಯಾಳಸೆಟ್ಟಿಯೂ ಇವನ ಹೆಂಡತಿ ಚೆಂಗಳವ್ವೆಯೂ ಕಂಚಿಯಲ್ಲಿ ನಿತ್ಯವೂ ಸಹಸ್ರ ಜಂಗಮಾರಾಧನೆಯನ್ನು ಮಾಡುತ್ತಿದ್ದರು. ಇವರ ನಿಷ್ಠೆಯನ್ನು ಪರೀಕ್ಷಿಸುವುದಕ್ಕೆ ಪರಮೇಶ್ವರನು ಜಂಗಮರೂಪಿನಿಂದ ಬಂದು, ಸೊಗಸಾದ ಮಗನನ್ನು ಕೊಂದು ಮಾಂಸವನ್ನು ಅಡಿಗೆಮಾಡಿಸಿದರೆ, ನನ್ನ ನೇಮಕ್ಕೆ ಸರಿಹೋಗುವುದು ನಿನ್ನಿಷ್ಟವಿದ್ದಂತೆ ಮಾಡೆಂದನು. ತಾಯಿತಂದೆಗಳು ಒಪ್ಪಿಕೊಂಡುದನ್ನು ತಿಳಿದು ಅವರ ಮಗನಾದ ಚೀಳಾಳನ ಬಳಿಗೆ ಹೋಗಿ ನಿನ್ನನ್ನು ಒಬ್ಬ ಬಡ ಗೊರವನಿಗಾಗಿ ಕೊಂದುಹಾಕುವರು, ಮನೆಗೆ ಹೋಗದೆ ಎಲ್ಲಿಯಾದರೂ ಪ್ರಾಣವನ್ನು ಉಳಿಸಿಕೋ ಎಂದು ಪರಮೇಶ್ವರನು ಹೇಳಿದುದಕ್ಕೆ ಶಿವಾರ್ಪಿತವಾಗುವ ನನಗೆ ಇದಕ್ಕಿಂತ ಪ್ರಾಣವೇನೂ ದೊಡ್ಡದಲ್ಲವೆಂದ ಹುಡುಗನಭಕ್ತಿಗೂ ಮೆಚ್ಚಿದನು. ಮನೆಗೆ ಬಂದ ಮಗನನ್ನು ಕೊಂದು ಪಾಕಮಾಡಿ, ಬಿಜಯಂಗೆಯ್ಸಲು ಆರೋಗಿಸುವ ಸಮಯದಲ್ಲಿ ನೀವೂ ಜೊತೆಯಲ್ಲಿ ಊಟಕ್ಕೆ ಕುಳಿತುಕೊಳ್ಳಬೇಕೆಂದು ಹೇಳಿದನು. ಹಾಗೂ ಕುಳಿತರು, ಮಕ್ಕಳಿಲ್ಲದ ಮನೆಯಲ್ಲಿ ತಪಸ್ವಿಗಳು ಊಟಮಾಡರೆಂದು ತಿಳಿಯದೇ ? ಮಗನನ್ನು ಕರೆ ಎಂದು ಹೇಳಲು ಚೆಂಗಳವ್ವೆ ಎದ್ದು ಹೋಗಿ ನಾಲ್ಕು ದಿಕ್ಕಿನಲ್ಲಿಯೂ ಘಟ್ಟಿಯಾಗಿ ಕೂಗಿ ಕರೆದಳು. ಕೂಡಲೆ ಚೀಳಾಳನು ಓಡಿಬಂದುದನ್ನು ಕಂಡು ಎಲ್ಲರೂ ಸಂತುಷ್ಟರಾದರು. ಅವರೆಲ್ಲರನ್ನೂ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿರುವಾಗ ಸೆಟ್ಟಿಯ ಮನಸ್ಸಿನಲ್ಲಿ ನನ್ನಂತೆ ಭಕ್ತಿಯಿಂದ ಮಗನನ್ನು ಶಿವಾರ್ಪಣೆಮಾಡಿ ಪರಮೇಶ್ವರನನ್ನು ಮೆಚ್ಚಿಸಿದವರಾರೂ ಇಲ್ಲವೆಂದು ಹೆಮ್ಮೆ ಹುಟ್ಟಿದುದನ್ನು ಗೌರೀವರನು ತಿಳಿದು ಅವನೊಡನೆ ಭೂಲೋಕಕ್ಕೆ ಬಂದು ನಿಂಬಿಯಕ್ಕನ ಮನೆಯಲ್ಲಿ ಇಳಿದನು. ಇವರನ್ನು ಕಂಡಕೂಡಲೆ ತಕ್ಕ ಉಪಚಾರಗಳನ್ನು ಮಾಡಿ, ಅಡಿಗೆಮಾಡಿ ನಿಂಬಿಯಕ್ಕನೆಲ್ಲಿಗೋ ಹೋಗಿದ್ದ ಸಮಯಕ್ಕೆ ದನಗಳನ್ನು ಮೇಯಿಸುತ್ತಿದ್ದ ಅವಳ ಮಗನು ಅಡಿಗೆಯಮನೆಗೆ ಹೋಗಿ ಒಂದು ಹೂರಿಗೆಯನ್ನು ತೆಗೆದುಕೊಂಡು ಬರುತ್ತಿದ್ದುದನ್ನು ಕಂಡು ನಿಂಬಿಯಕ್ಕನು ಆಗಲೇ ಕೈಯ್ಯಲ್ಲಿದ್ದ ಕಟ್ಟಿಗೆಯಿಂದ ಹೊಡೆದುಕೊಂದು ಒಂದುಕಡೆಗೆ ಎಳೆದುಹಾಕಿ ಮತ್ತೆ ಪಾಕವನ್ನು ಮಾಡಿ ಅತಿಥಿಗಳಿಗೆ ಸತ್ಕಾರವನ್ನು ಮಾಡಿದಳು. ಆ ಸಮಯದಲ್ಲಿ ಮಗನನ್ನು ಕರೆ ಎಂದು ಹೇಳಿದುದಕ್ಕೆ ಶಿವದ್ರೋಹಿ ಅವನ ಪಾಪಕ್ಕೆ ಅವನು ಫಲವನ್ನು ಅನುಭವಿಸಲಿ, ದೇವರು ಆರೋಗಿಸಬಹುದು, ಎಂದು ನಿಂಬಿಯಕ್ಕನು ನುಡಿದಳು. ಇದನ್ನೆಲ್ಲಾ ನೋಡಿದ ಸಿರಿಯಾಳಸೆಟ್ಟಿಯನ್ನು ಏನೈಯ್ಯಾ ಸೆಟ್ಟಿ ಎಂದು ಪರಶಿವನು ಕೇಳಿದ ಕೂಡಲೆ ತಲೆಯನ್ನು ಬಗ್ಗಿಸಿಕೊಂಡು ಸುಮ್ಮನಿದ್ದನು).

೫೧. ಅವತೆ = ಅವಸ್ಥೆ, ಮಱುಗು = ಶೋಕಿಸು, ಕೈತವ = ಮೋಸ, ಅಗಿದು = ಹೆದರಿ, ಸೊಡರ್ = ದೀಪ, ಎನ್ನನುಂ = ಎಂಥವನೂ, ಮಱುಭವ = ಪುನರ್ಜನ್ಮ, ಎಱಿಗಂ = ಬೀಳಲಾರನು.

(ದೀಪದ ಕಲಿಯಾರನಕಥೆ—ಈತನು ಕಾಂಚೀಪುರದ ಶಿವಭಕ್ತ. ಇವನು ನೆರೆ ಊರಿಗೆ ಹೋಗುತ್ತಿದ್ದ ದಾರಿಯಲ್ಲಿ ಒಂದು ಜೀರ್ಣಾಲಯದಲ್ಲಿದ್ದ ಶಿವನನ್ನು ಕಂಡು, ದೇವಾಲಯವನ್ನು ಉದ್ಧಾರಮಾಡಿ ತನ್ನಲ್ಲಿದ್ದ ಹಣವನ್ನೆಲ್ಲಾ ವೆಚ್ಚಮಾಡಿದನು. ದೀವಿಗೆಗೆ ಎಣ್ಣೆಯೂ ಇಲ್ಲದೆ ಹೋಯ್ತು. ಸುತ್ತಮುತ್ತಲಿದ್ದ ಮರ, ಕಟ್ಟಿಗೆ, ಕಡ್ಡಿ ಇವುಗಳನ್ನು ತಂದುಹಾಕಿ ಉರಿಸಿದನು. ಅದೂ ಆಗಿಹೋದಮೇಲೆ ತನ್ನ ಜಡೆಯನ್ನೇ ಸುಟ್ಟುರಿಸಿ ದೀವಿಗೆಯನ್ನು ಹಿಡಿದಿರಲು ಮೈಯೆಲ್ಲಾ ಸುಟ್ಟುಹೋಗುವ ಸಮಯಕ್ಕೆ ಪರಮೇಶ್ವರನು ಪ್ರತ್ಯಕ್ಷನಾಗಿ ವರವನ್ನು ಬೇಡೆನಲು ನನಗೆ ವರವೇನೂ ಬೇಡ

ವಯ್ಯಾ ಈ ಕಾಡಿನಲ್ಲಿ ಹಾಳುದೇವರಂತೆ ಇರಬೇಡ ನಡೆ ನಮ್ಮ ಕೈಲಾಸಕ್ಕೆ ಹೋಗುವ ಎಂದು ಹೇಳಿ ವಿಮಾನವನ್ನೇರಿ ಕೈಲಾಸಕ್ಕೆ ಹೋದನು).

೫೨. ಆರ್ಪರರೆ = ಸಾಮರ್ಥ್ಯವುಳ್ಳವರೇ, ಅಲ್ಕ್ರಿಯೆ = ಪ್ರೀತಿಯಿಂದ.

೫೩. ಉಗುತರೆ = ಸುರಿಯುತ್ತಿರಲು, ಪಲುಂಬಿ = ಕಳವಳಿಸಿ, ಏವಗೆ = ರೀತಿಯಾವುದು, ಜೋಡು = ಸಮಾನ, ಬೇಡರ ಕಣ್ಣಪ್ಪನ ಕಥೆ. (ಕಾಳಹಸ್ತಿಗಿರಿಪ್ರದೇಶದಲ್ಲಿ ಉಡುವೂರು ಎಂಬ ಕಡೆಯಲ್ಲಿ ಈತನ ವಾಸಸ್ಥಳ. ಈತನು ಬೇಟೆಯಾಡಿ ಬಳಲಿ ನಿದ್ದೆಹೋಗುತ್ತಿದ್ದಾಗ ಪರಮೇಶ್ವರನು ಬಂದು ವಿಭೂತಿಯನ್ನು ಹಣೆಗೆ ಹಚ್ಚಿ ಶಿವತೀರ್ಥ ಕಳಶಜಲದಿಂದ ಪವಿತ್ರದೇಹನಾಗಿ ಮಾಡಿ ಪಂಚಾಕ್ಷರಿಯನ್ನುಪದೇಶಿಸಿ ಅಭಯಹಸ್ತವನ್ನು ತಲೆಯೊಳಿಟ್ಟು ಮುಂದಕ್ಕೆ ನಡೆ ನಿನ್ನ ಪ್ರಾಣಲಿಂಗವು ಕಾಣಿಸುವುದೆಂದು ಹೇಳಿದಂತೆ ಕನಸುಕಂಡವನಹಾಗೆ ಎದ್ದು ಹೊರಟನು. ಎಂದೂ ಹೋಗದ ಒಂದು ಹೊಸಮಾರ್ಗಕ್ಕೆ ಬಂದು ಜೊತೆಯ ಬೇಟೆಗಾರರನ್ನು ಬಿಟ್ಟು ಮುಂದೆ ಹೋಗಲು ದಿವ್ಯಲಿಂಗವನ್ನು ಕಂಡನು. ಅಲ್ಲಿ ದನುಜೇಂದ್ರರು ಮಹೇಶ್ವರನ ವರದಿಂದ ಮೃಗಗಳಾಗಿ ಹುಟ್ಟಿರಲು ಅವುಗಳನ್ನು ವಧಿಸಿ ಪಾಕಮಾಡಿ ಶಿವಾರ್ಪಣೆಮಾಡಿ ಹೋಗುತ್ತಿದ್ದನು. ತಾನು ಆರಾಧನೆಮಾಡುವುದಕ್ಕೆ ಮುಂಚೆ ಅಲ್ಲಿ ಪೂಜೆಮಾಡಿದ್ದ ದ್ರವ್ಯಗಳನ್ನೆಲ್ಲಾ ತನ್ನ ಜೋಡುಮೆಟ್ಟಿದ ಕಾಲಿಂದ ನೂಕಿ ಕಳೆದು ಪೂಜೆಮಾಡುತ್ತಿದ್ದನು. ಈ ಲಿಂಗವನ್ನು ಆರಾಧಿಸುತ್ತಿದ್ದ ತಾಪಸನು ಇದನ್ನೆಲ್ಲಾ ನೋಡಿ ಈ ಅತ್ಯಾಚಾರಕ್ಕೆ ಖತಿಗೊಂಡು ಲಿಂಗವನ್ನು ಜೋಪಾನಮಾಡಿ ದ್ರೋಹಿಯನ್ನು ಕಂಡುಹಿಡಿಯಬೇಕೆಂದು ಹೊಂಚುಹಾಕಿಕೊಂಡಿದ್ದನು. ಹೀಗಿರಲು ಒಂದು ದಿನ ಮಲಹರನ ವಾಮಾಕ್ಷಿಯಿಂದ ನೀರು ಸುರಿಯುತ್ತಿದ್ದುದನ್ನು ಕಂಡು ಕಣ್ಣಪ್ಪನು ಬಹು ವಿಧವಾಗಿ ಪೇಚಾಡಿ ಕೊನೆಗೆ ತನ್ನ ಕಣ್ಣನ್ನು ಕಿತ್ತು ಇಡಲು ಪರಮೇಶ್ವರನು ಅವನ ಎರಡು ಕೈಗಳನ್ನೂ ಹಿಡಿದುಕೊಂಡನು. ಆಗ ಅಲ್ಲಿಯೇ ಅವಿತು ಕೋಪಿಸಿಕೊಂಡಿದ್ದ ತಾಪಸನು ಎದ್ದು ಬಂದು ಕಾಲ್ಗೆರಗಿ ಕೊಂಡಾಡಿದನು).

೫೪. ಊಹಿಸುವುದಕ್ಕೆ ಅಸಾಧ್ಯವಾದ ನಿಜನಿವಾಸವೆಂದರೆ ಕೈಲಾಸಕ್ಕೆ, ತಳರ್ವ = ಬೆಳಗದೆಹೋಗುವ ಸಮಯಕ್ಕೆ, ಬರ್ಕೆ = ಬರಲಿ, ದಾಸೋಹಿಗಳು = ಶಿವಭಕ್ತರು.

ಓಹಿಲಯ್ಯನಕಥೆ—ಈತನು ಸೌರಾಷ್ಟ್ರಪುರದ ಸೋಮನಾಥನನ್ನು ಪ್ರತಿದಿನವೂ ತನ್ನ ತೂಕದ ಗುಗ್ಗುಳದಿಂದ ಆರಾಧಿಸುತ್ತಿದ್ದನು. ಹಗಲಿರುಳೆನ್ನದೆ ತನಗೆ ಮನಸ್ಸುಬಂದ ವೇಳೆಗೆ ಬಂದು ಗೌಳತಾಪಸರ ಪೂಜೆಯನ್ನು ಕಳೆದು ಆರಾಧಿಸುತ್ತಿರಲು ಅವರು ಖತಿಗೊಂಡು ಒಳಗೆ ಅನ್ಯರು ಯಾರನ್ನೂ ಬಿಡಬೇಡಿ. ಬಾಗಿಲಹೊರಗಿದ್ದು ಬೇಕಾದರೆ ಪೂಜೆಮಾಡಲಿ ಎಂದು ಆಜ್ಞೆಮಾಡಿದರು. ಎಂದಿನಂತೆ ಓಹಿಲಯ್ಯನು ನಡುವಿರುಳಲ್ಲಿ ಬಂದಕೂಡಲೆ ಸೋಮನಾಥನು ಬಾಗಿಲ ಬೀಗವನ್ನು ತೆಗೆದು ಪೂಜೆಯನ್ನು ಅಂಗೀಕರಿಸಿದನು. ಇದನ್ನೂ ತಡೆಯಬೇಕೆಂದು ಇವನಿಗೆ ಭಿಕ್ಷೆಕೊಡಬೇಡವೆಂದು ಕಟ್ಟಳೆಮಾಡಿದರು. ಅದಕ್ಕೂ ಹಿಂಜರಿಯದೆ ಪೂಜಿಸಿದ್ದ ಪತ್ರವನ್ನು ತಿಂದು ಬದುಕಿರುವನೆಂದು ತಿಳಿದು ಅದನ್ನೂ ಸುಡಿಸಿದರು. ಅದಕ್ಕೂ ಹಿಂಜರಿಯದೆ ಬೂದಿಯನ್ನೇ ತಿಂದು ತನ್ನ ಭಕ್ತಿಯನ್ನು ಸಲಿಸುತ್ತಿದ್ದನು. ಒಂದುದಿನ ಗುಗ್ಗಳವನ್ನು ಹೊರಲಾರದೆ ಕಾಲಿಗೆ ಮುಳ್ಳು ತಗಲಿ ಬಾಧೆಪಡುತ್ತ ಬರುತಿದ್ದವನನ್ನು ದಾರಿಯಲ್ಲಿ ಕಂಡು ಪರಮೇಶ್ವರನು ಕಾಲಲ್ಲಿದ್ದ ಮುಳ್ಳನ್ನು ತೆಗೆಯಲು ಅದ್ವಾರದಿಂ ತಿಂದ ಬೂದಿಯೆಲ್ಲಾ ಹೊರಗೆ ಬಂದಿತು. ಆ ದಿನ ಗುಗ್ಗಳವಿಲ್ಲದೆ ಧೂಪದ ಹೊತ್ತಿಗೆ ಕೈಯ್ಯ

ಘಂಟೆಯನ್ನು ಘಣಘಣನೆ ಆಡಿಸುತ್ತ ತಾನೇ ಅಗ್ನಿಕುಂಡದಲ್ಲಿ ಕುಳಿತು ಕೈಲಾಸಕ್ಕೆ ಹೊರಟು ಹೋದನು.

ಹಾಗೆ ಓಹಿಲಯ್ಯನು ಹೋಗುತ್ತಿರುವುದನ್ನು ಕಂಡು ಗೂರ್ಜರರಾಯನು ತನ್ನ ಹೆಂಡತಿಯೊಡನಾಡುತ್ತಿದ್ದ ನೆತ್ತದಾಟವನ್ನು ಬಿಟ್ಟು ನಗಲು, ಕಾರಣವೇನೆಂದಾಕೆ ಕೇಳಿದಳು. ಈ ಓಹಿಲಯ್ಯನು ಒಬ್ಬನೇ ಕೈಲಾಸಕ್ಕೆ ಹೋಗುವುದಕ್ಕೆ ನಗುವೆನೆಂದನು. ಹಾಗಾದರೆ ನೀವು ಯಾರಾರನ್ನು ಕರೆದುಕೊಂಡು ಹೋಗುವಿರಿ ಎಂದಳು. ಅದಕ್ಕೆ ಊರೊಳಗೆಲ್ಲಾ ಕೈಲಾಸಕ್ಕೆ ಹೋಗುವೆವು, ಬೇಕಾದವರೆಲ್ಲರೂ ಬರಬಹುದೆಂದು ಡಂಗುರಹೊಯಿಸಿ ನೆರೆವೂರಿಗೆ ಹೋಗುವನಂತೆ ಎಲ್ಲರನ್ನೂ ಕರೆದುಕೊಂಡು ಕೈಲಾಸಕ್ಕೆ ಹೋದನು.

೫೫. ಕಲ್ಯಾಣನಗರದಲ್ಲಿ ಶಿವಪೂಜಾವಸರದಲ್ಲಿ ಕೆಲವರು ಸೂಳೆಯಮನೆಗೆ ಹೋಗುವರೆಂದು ತಿಳಿದು ತಾನೂ ಸೂಳೆಯಮನೆಗೆ ಹೋಗಬೇಕೆಂದು ಹೇಳಲು ಬಸವರಸನು ಈತನನ್ನು ತಕ್ಕ ಕಡೆಗೆ ಕರೆದುಕೊಂಡು ಹೋಗುವಂತೆ ಏರ್ಪಾಡುಮಾಡಿದನು. ಅಲ್ಲಿ ಹೋಗಿ ಈತನು ಅಲ್ಲಿ ಎಲ್ಲಾ ಶಿವಪೂಜೆಯೆಂದೇ ಭಾವಿಸಿ ಬೆಳಗಾಗುವವರೆಗೂ ಶಿವಧ್ಯಾನದಲ್ಲಿ ಜಾಗರಣೆಮಾಡಿ ಬಂದನು.

೫೬. ಎಲವೂರಲ್ಲಿ ರುದ್ರಪಶುಪತಿಯೆಂಬಾತನು ಪುರಾಣವನ್ನು ಕೇಳುತ್ತಿದ್ದನು. ಸಮುದ್ರಮಥನವಾದಂದು ಹುಟ್ಟಿದ ಗರಳವನ್ನು ಈಶ್ವರನು ಕುಡಿದನೆಂದು ಕೇಳಿ ಚಿಂತಾಕ್ರಾಂತನಾಗಿ ವಿಷವನ್ನು ಕಾಜಿವಿದ್ದರೆ ಪ್ರಾಣವನ್ನು ಬಿಡುವೆನೆಂದು ಕೂಗಿಕೊಳ್ಳಲು ಪರಮೇಶ್ವರನು ಪ್ರತ್ಯಕ್ಷನಾಗಿ ವಿಷವು ನನ್ನನ್ನು ಕೊಲ್ಲುವುದಿಲ್ಲ, ಕಂಠದಲ್ಲಿ ಸ್ವಲ್ಪವೇ ಇರುವುದೆನ್ನಲು, ನೋಡಬೇಕೆಂದ ರುದ್ರಪಶುಪತಿಯನ್ನು ತೊಡೆಯಮೇಲೇರಿಸಿ ನೋಡೆಂದು ಕೈಲಾಸಕ್ಕೆ ಕರೆದುಕೊಂಡು ಹೋದನು.

ಅಸಡ್ಡೆ = ಅಶ್ರದ್ಧೆ, ಪರೆದು = ವ್ಯಾಪಿಸಿ, ಹರಡಿಕೊಂಡು, ಕೊಲ್ಲದೆಮಾಣದು = ಕೊಲ್ಲದೆ ಬಿಡದು, ಕೊಂದೇಕೊಲ್ಲುವುದು.

೫೭. ಕಾಯ್ದ್ದಯೋ = ಮುಳಿದೆಯೋ, ಇಱಿ = ತಿವಿ, ಕತ್ತರಿಸು.

೫೮. ಪೊರ್ದುಗೆ = ಹೊಂದಿರುವಿಕೆ, ನಕ್ಕನಾರರು, (ಶಾಂತಮಂಡಲದಲ್ಲಿದ್ದ ನಕ್ಕನಾರನೂ ಅವನ ಹೆಂಡತಿಯೂ ಶಿವನನ್ನು ದೃಢಭಕ್ತಿಯಿಂದ ಪೂಜಿಸುತ್ತಿದ್ದರು. ಅಲ್ಲಿ ಲಿಂಗದಮೇಲೆ ಒಂದು ಜಾಡರಹುಳುವು ನೂಲುಕಟ್ಟಿತ್ತು. ಇದನ್ನು ಆಕೆ ಕಂಡು ಉಫ್ ಉಫ್ ಎಂದು ಊದುತ್ತಿರುವಾಗ ಉಗುಳಿನ ಎಂಜಲು ಬಿದ್ದಿತು. ಗಂಡನು ಇದನ್ನು ನೋಡಿ ಕೋಪಿಸಿಕೊಳ್ಳಲು, ಇಬ್ಬರೂ ಮನೆಗೆ ಹೋದರು. ಮರುದಿವಸ ಬಂದುನೋಡಲು ಇವಳ ಉಗುಳು ಬಿದ್ದಿದ್ದ ಕಡೆಯಲ್ಲಿ ಮಾತ್ರ ಚೆನ್ನಾಗಿತ್ತು. ಮಿಕ್ಕ ಕಡೆಯಲ್ಲಿ ಹುಗುಳೆದ್ದಿತ್ತು. ಹೆಂಡತಿಯ ಭಕ್ತಿಯ ಕಾರ್ಯವನ್ನು ತಡೆದುದಕ್ಕೆ ದುಃಖಿಸಿದನು. ಅವಳೂ ಗಂಡನವನಾತನ್ನು ತಿರಸ್ಕರಿಸಿಯಾದರೂ ಮಿಕ್ಕಕಡೆಯಲ್ಲಿಯೂ ಉಗುಳದೆ ಹೋದೆನಲ್ಲಾ ಎಂದು ಚಿಂತಿಸಿ ತನ್ನ ಅಪರಾಧಕ್ಕೆ ಪ್ರಾಣವನ್ನು ಬಿಡುವೆನೆಂದು ನಿಶ್ಚಯಿಸಿಕೊಂಡಾಗ ಪರಮೇಶ್ವರನು ಪ್ರತ್ಯಕ್ಷನಾಗಿ ಬಂದು ಅವರಿಬ್ಬರನ್ನೂ ಕೈಲಾಸಕ್ಕೆ ಕರೆದುಕೊಂಡು ಹೋದನು.

೫೯. ಔಡಲತೈಲ = ಕೈಯೆಣ್ಣೆ, ನೇರಿತಾಗಿಸಲ್ = ಡೊಂಕಿಲ್ಲದಂತೆ ಮಾಡಲು, ಬಾಡಬ = ಬ್ರಾಹ್ಮಣ, (ಪೂಜಾರಿ) ಏವೆಂ = ಏನುಮಾಡುವೆನು, ಕೂತ್ತಾಡಿಯನಾಟ್ಯ = ನಟರಾಜನಲೀಲೆ.

ನಾಟ್ಯನ ಮಿತ್ತಡಿಯಾರನಕಥೆ—ಕಂಚಿಯ ಏಕಾಂಬರೇಶ್ವರಾಲಯದಲ್ಲಿ ತಾಂಡವಮೂರ್ತಿಯ ಕೈಕಾಲುಗಳನ್ನು ನೋಡಿ ವ್ಯಥೆಪಟ್ಟು ನೆಟ್ಟಗೆಮಾಡೆಂದು ಶಿವಭಕ್ತನು ಪೂಜಾರಿಗೆ ಎಷ್ಟು ಹಣವನ್ನು ಕೊಟ್ಟರೂ ಅವನಿಂದ ಸಾಧ್ಯವಾಗದೆಹೋಯ್ತು. ಇದನ್ನು ನೋಡಿ ಇನ್ನು ಪ್ರಯೋಜನವಿಲ್ಲ, ಪ್ರಾಣವನ್ನು ಬಿಡುವೆನೆಂದು ತಲೆಯನ್ನು ಕತ್ತರಿಸಿಕೊಳ್ಳುವ ಸಮಯಕ್ಕೆ ಸರಿಯಾಗಿ ತಾಂಡವಮೂರ್ತಿ ಪ್ರತ್ಯಕ್ಷನಾಗಿ ನಾಟ್ಯವನ್ನಾಡಿದುದರಿಂದ ಕೈಕಾಲು ಹೀಗಾಯ್ತೆಂದು ಹೇಳಿದನು. ಹಾಗಾದರೆ ಹೇಗೆ ನಾಟ್ಯವಾಡಿದೆ ಎಂದು ಕೇಳಿದ ಭಕ್ತನಿಗೆ ನಾಟ್ಯವನ್ನಾಡಿ ತೋರಿಸಿ ಕೈಲಾಸಕ್ಕೆ ಕರೆದುಕೊಂಡುಹೋದನು.

೬೧. ಮರಲ್ಗೆ = ಹೂವಿಗೆ, ಉರ್ಚು = ಎಳೆದುಕೊಂಡು, ತುಕ್ಕಡಿಸು = ತುಂಡುತುಂಡಾಗಿ ಕತ್ತರಿಸು, ನರಸಿಂಹಮೊನೆಯಾರ್, ಈತನ ಬಾಹೂರೆಂಬ ಸ್ಥಳದಲ್ಲಿ ಅರಸನಾಗಿದ್ದನು. ಹೂವಡಿಗನು ಶಿವಾರ್ಚನೆಗೆ ಹೂಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಇವನ ಹೆಂಡತಿ ಒಂದು ಹೂವನ್ನು ಕೈಯಿಂದ ತೆಗೆದು ಮೂಸಿನೋಡಿದಳು. ಹೂವಡಿಗನು ತತ್ಕ್ಷಣವೇ ಅವಳ ಮೂಗನ್ನು ಕೊಯ್ದುಬಿಟ್ಟನು. ಈ ಹೂವಡಿಗನು ಮಾಡಿದ ಕೃತ್ಯವನ್ನು ಅರಸನಿಗೆ ತಿಳಿಸಲು, ಅರಸನು ಆ ಹೂವಡಿಗನನ್ನೂ ಅರಸಿಯನ್ನೂ ಕರೆಯಿಸಿ, ಹೂವಿಗೆ ನೀಡಿದ ಕೈಯನ್ನು ಮೊದಲು ಕತ್ತರಿಸದೆ ಮೂಗನ್ನು ಕೊಯ್ದುದು ನಿನ್ನದು ತಪ್ಪು-ಎಂದು ಹೇಳಿ ಅರಸಿಯನ್ನು ಹೂವಿಗೆ ನೀಡಿದ ಕೈಯ್ಯನ್ನು ಹಾಗೆಯೇ ನೀಡೆಂದು ಹೇಳಿದನು. ಅವಳು ತಡಮಾಡಿದುದಕ್ಕೆ ತಡೆಯದೆ ಕೈಯ್ಯನ್ನು ಎಳೆದು ಬಾಚಿಯಿಂದ ತುಂಡುತುಂಡಾಗಿ ಮಾಡಿಬಿಟ್ಟನು. ಇದಕ್ಕೆ ಪರಮೇಶ್ವರನು ಮೆಚ್ಚಿ ಅವಳಿಗೆ ಕೈ ಮೂಗುಗಳನ್ನು ಕೊಟ್ಟು ಅವರನ್ನು ಪಾಲಿಸಿದನು.

೬೨. ಕಡುಕಾಯ್ವರ್ = ಬಹಳವಾಗಿ ಕೋಪಿಸಿಕೊಳ್ಳುವರು.

ಕೋಳೂರ ಕೊಡಗೂಸಿನ ಕಥೆ—ಶಿವದೇವನೆಂಬಾತನು ಪ್ರತಿದಿನವೂ ಹಾಲನ್ನು ದೇವರಿಗೆ ತೋರಿಸಿ ಮನೆಗೆ ತೆಗೆದುಕೊಂಡು ಹೋಗುತ್ತಿದ್ದನು. ಒಂದು ದಿನ ನೆರೆವೂರಿಗೆ ಹೋಗಬೇಕಾಗಿದ್ದುದರಿಂದ ತನ್ನ ಮಗಳಾದ ಚೆನ್ನಕ್ಕನಿಗೆ ಹಾಲನ್ನು ದೇವರಿಗೆ ಸಮರ್ಪಿಸಿ ಬಾ ಎಂದು ಹೇಳಿಹೋದನು. ಚೆನ್ನಕ್ಕನು ನಿಜವಾಗಿಯೂ ದೇವರು ಹಾಲು ಕುಡಿಯುವನೆಂದು ತಿಳಿದು ಕುಡಿಯದಿದ್ದುದರಿಂದ ಮನನೊಂದು ದೇವರನ್ನು ಬೇಡಿಕೊಳ್ಳಲು ದೇವರು ಹಾಲುಕುಡಿದನು. ಬರಿಯಬಟ್ಟಲನ್ನು ತೆಗೆದುಕೊಂಡು ದೇವಾಲಯದಿಂದ ಬರುತ್ತಿದ್ದ ಚೆನ್ನಕ್ಕನನ್ನು ನೋಡಿ ಕೋಪಿಸಿಕೊಂಡನು. ದೇವರು ಹಾಲುಕುಡಿದನೆಂದು ಹೇಳಿದರೆ ಶಿವದೇವನಂತೆ ಯಾರೂ ನಂಬುವುದಿಲ್ಲ. ಮರುದಿವಸ ಇವಳ ಮಾತಿನಂತೆ ಹಾಲನ್ನು ತೆಗೆದುಕೊಂಡು ಹೋಗಲು ದೇವರು ಅದನ್ನು ಮುಟ್ಟಲೇ ಇಲ್ಲ. ಎಲ್ಲಿ ನಿಮ್ಮ ದೇವರು ಕುಡಿಯಲೇ ಇಲ್ಲವಲ್ಲಾ—ಎಂದು ಕೋಪದಿಂದ ಹೊಡೆಯುವುದಕ್ಕೆ ಹೋಗಲು ಚೆನ್ನಕ್ಕನು ದೇವರನ್ನು ಮರೆಹೊಕ್ಕಳು. ತತ್ಕ್ಷಣವೇ ಪರಮೇಶ್ವರನು ಅವಳನ್ನು ಉದರದೊಳಗಡಗಿಸಿಕೊಂಡು ಹಾಲಬಟ್ಟಲಿಗೆ ಕೈನೀಡಿದನು. ಚೆನ್ನಕ್ಕನನ್ನು ಹಿಡಿಯಬೇಕೆಂದು ಅವಳ ಚಂಡಿಕೆಯನ್ನು ಶಿವದೇವನು ಹಿಡಿದುದರಿಂದ ಅದೊಂದುಮಾತ್ರ ಹೊರಗೆನಿಂತಿತು. ಈಗಲೂ ಬೆಳೆಯುತ್ತಿರುವ ಆ ಚಂಡಿಕೆಯನ್ನು ಆರುತಿಂಗಳಿಗೊಮ್ಮೆ ಕತ್ತರಿಸುತ್ತಾರೆಂದು ಹೇಳುತ್ತಾರೆ.

೬೩. ಕರಿ = ಆನೆ, ಆರುತೆ = ಗಟ್ಟಿಯಾಗಿಕೂಗಿ, ಅಬ್ಬರಿಪ = ಸಂಭ್ರಮದಿಂದ ಕೂಗುವ.

ಇಱಿವತ್ತರಕಥೆ—ದ್ರವಿಡದೇಶದಲ್ಲಿ ಕರವೀರಚೋಳನ ಕಾಲದಲ್ಲಿದ್ದ ಪರಮಶಿವಭಕ್ತನು. ಈತನ ನೇಮವೇನೆಂದರೆ—ಶಿವಭಕ್ತರಿಗೆ ಅಪಕಾರವನ್ನು ಮಾಡಿದವರನ್ನು ವಿಚಾರಿಸಿ ಕೊಲ್ಲುವುದು ಒಂದು ದಿನ ಪೂಜಾರಿಯೊಬ್ಬನು ಹೂವಿನತೋಟಕ್ಕೆ ಹೋಗಿರಲು ರಾಜನ ಆನೆಯೊಂದು ಸರಪಣಿಯನ್ನು ಕಿತ್ತುಕೊಂಡು ಧಾಳಾಧೂಳಿ ಮಾಡಿದುದರಿಂದ ಎಲ್ಲಿಯೂ ಹೂ ಸಿಕ್ಕದೆ ಆನೆ ಇದ್ದ ಕಡೆಗೆ ಅವನು ಬಂದನು. ಕೂಡಲೆ ಅವನನ್ನು ಆನೆ ಸೀಳಿಹಾಕಿತು. ಈ ಆರ್ಭಟದ ಶಬ್ದವನ್ನು ಕೇಳಿ ಬಂದು ಇರಿವತ್ತರು ಆನೆಯನ್ನು ನೋಡಿ ಅದರ ಮದವನ್ನು ಮುರಿದು ಕೊಲ್ಲಲು ಮಾವಟಿಗನು ಬಿಡಿಸಿಕೊಳ್ಳುವುದಕ್ಕೆ ಹೋಗಿ ಸತ್ತನು. ಕೊನೆಗೆ ಅರಸನಾದ ಕರವೀರಚೋಳನು ಬಂದು ಇರಿವತ್ತರಿಗೆ ನಮಸ್ಕರಿಸಿ ಆನೆಯನ್ನು ಕಟ್ಟಿಹಾಕದೆ ಬಿಟ್ಟ ಮಾವಟಿಗನ ಕೆಲಸವನ್ನು ಸರಿಯಾಗಿ ವಿಚಾರಿಸಿಕೊಳ್ಳದಿದ್ದ ಅಪರಾಧವು ನನ್ನದಾದುದರಿಂದ ನನ್ನ ತಲೆಯನ್ನು ಕಡಿಯಬೇಕೆಂದು ಕತ್ತರಿಸಿಕೊಂಡು ಮಡಿದನು. ಪರಮೇಶ್ವರನು ಆಗ ಪ್ರತ್ಯಕ್ಷನಾಗಿ ಸತ್ತಿದ್ದವರೆಲ್ಲರನ್ನೂ ಕೈಲಾಸಕ್ಕೆ ಕರೆದುಕೊಂಡು ಹೋದನು.

೬೪. ನೇಣ್ = ಹಗ್ಗ, ಬೆನ್ನೊಳಿ = ಹಿಂದಟ್ಟಿಕೊಂಡು ಬಂದು, ಅಸುಂಗೊಳ್ = ಪ್ರಾಣವನ್ನು ತೆಗೆ, ಕಿನ್ನರೀಬೊಮ್ಮಯ್ಯಗಳು. ಇವರು ಪುಂಡೂರಲ್ಲಿದ್ದ ಶರಣರು. ಬಸವರಸನ ಕೀರ್ತಿಯನ್ನು ಕೇಳಿ ಕಲ್ಯಾಣಕ್ಕೆ ಬಂದಿದ್ದರು. ಒಂದುದಿನ ಒಬ್ಬ ವಿಟನು ಸೂಳೆಯ ಹಬ್ಬಕ್ಕೆ ವಧಿಸುವುದಕ್ಕೆ ಒಂದು ಕುಱಿಯನ್ನು ಕೊಂಡುಕೊಂಡು ಬರುತ್ತಿರುವಾಗ ದಾರಿಯಲ್ಲಿ ಅದಕ್ಕೆ ಕಟ್ಟಿದ್ದ ಹಗ್ಗವು ಹರಿದುಹೋಗಿ ಕುರಿಯು ಶಿವಾಲಯದೊಳಗೆ ಹೊಕ್ಕಿಕೊಂಡಿತು. ಅದನ್ನು ಬೆನ್ನಟ್ಟಿ ಬಂದವನಿಗೆ ಪ್ರಾಣಿವಧೆ ಮಾಡಬೇಡ ನಿನಗೆ ಬೇಕಾದಷ್ಟು ಹಣಕೊಡುವೆನು ಎನ್ನಲು ಅವನು ಹಣವನ್ನು ತೆಗೆದು ಬೇರೊಂದು ಕುರಿಯನ್ನು ತೆಗೆದುಕೊಂಡು ಮತ್ತೊಂದು ಮಾರ್ಗವಾಗಿ ಸೂಳೆಯಮನೆಗೆ ಹೋದನು. ಹೋಗಿ ಸೂಳೆಗೆ ಈ ಸಂಗತಿಯನ್ನೆಲ್ಲಾ ಹೇಳಲು ಅವಳು ಇದರಲ್ಲಿ ಸ್ವಾರಸ್ಯವುಂಟೆಂದು ತನಗೆ ಆ ಕುರಿಯೇ ಬೇಕೆಂದು ಹಟಹಿಡಿದಳು. ಆಮೇಲೆ ವಿಟನು ದೇವಾಲಯಕ್ಕೆ ಬಂದು ಕುರಿಯನ್ನು ಕೇಳಿದುದಕ್ಕೆ ಬೊಮ್ಮಯ್ಯಗಳು ಹೇಳಿದ ಒಳ್ಳೆಯ ಮಾತುಗಳನ್ನು ಲಕ್ಷ್ಯಮಾಡದೆ ಎಳೆದುಕೊಂಡು ಹೋಗುವುದಕ್ಕೆ ಯತ್ನಿಸಿದನು. ಬೊಮ್ಮಯ್ಯಗಳು ಅವನನ್ನು ಹೊಡೆದು ಕೊಂದುಹಾಕಿದರು. ಈ ಸುದ್ದಿಯನ್ನು ಕೆಲವರು ಬಿಜ್ಜಳರಾಯನಿಗೆ ತಿಳಿಸಲು ಅವನು ತನ್ನ ಕಡೆಯವರನ್ನು ಕಳುಹಿ ವಿಚಾರಿಸುವಂತೆ ಆಜ್ಞಾಪಿಸಿದನು. ಬಂದವರಿಗೆ ಇದ್ದ ಸಂಗತಿಯನ್ನು ಹೇಳಿ ಇದಕ್ಕೆ ಸಾಕ್ಷಿ ದೇವರೇ ಎಂದು ಹೇಳಿಬಿಟ್ಟರು. ಅವರು ಬಿಜ್ಜಳರಾಯನಿಗೆ ತಿಳಿಸಲು ಅವನು ಪರಿವಾರದೊಡನೆ ಬಂದು ಏನಿದ ನ್ಯಾಯ ? ಎಲ್ಲಿ ನಿಮ್ಮ ಸಾಕ್ಷಿ ಎಂದನು. ಕಿನ್ನರೈಯ್ಯಗಳು ಕರೆದಕೂಡಲೆ ಪ್ರತ್ಯಕ್ಷ ಪ್ರಳಯಕಾಲದ ರುದ್ರನಂತೆ ಮಹೇಶ್ವರನು ಬಂದು ನಿಲ್ಲಲು ಬಿಜ್ಜಳನೂ ಅವನ ಪರಿವಾರವೂ ಮೂರ್ಛೆಹೋಗಿ ಬಿದ್ದಿದ್ದರು. ಬಸವರಾಜ ಮೊದಲಾದವರ ಸ್ತೋತ್ರವನ್ನು ಕೈಕೊಂಡು ಈಶ್ವರನು ಅಂತರ್ಧಾನನಾದಬಳಿಕ, ಬಿಜ್ಜಳನು ಕಿನ್ನರೈಯ್ಯಗಳ ಕಾಲಿಗೆ ಬಿದ್ದು ಅಭಯವನ್ನು ಬೇಡಿಕೊಂಡು ಸುಖವಾಗಿದ್ದನು. ಸತ್ತ ವಿಟನನ್ನೂ ಬೊಮ್ಮಯ್ಯಗಳು ಬದುಕಿಸಿದರು.

೬೫. ಮೇಣ್ = ವಿಕಲ್ಪಾರ್ಥ, ಪಱಮೆ = ಭ್ರಮರ, ತುಂಬಿ ಮಧುಪಾನವನ್ನು ಮಾಡುವುದರಿಂದ ಅದಕ್ಕೆ ಕಳ್ಳುಣಿಯೆಂದು ಹೆಸರು.

೬೬. ಈ ಜನಪದಕ್ಕೆ = ಈ ದೇಶಕ್ಕೆ, ಇಮ್ಮನೆ - ಸುಖವಾಗಿ.

ಆಕಾಶಮಾರ್ಗದಿಂದ ಸಮುದ್ರವನ್ನು ದಾಟಿ ಹಸ್ತಿನಾವತಿಗೆ ಈಗ ಬರುವುದು ಹೇಗೆ ? ಮಹೀಚರ = ಮನುಷ್ಯರು, ಖೇಚರ = ಆಕಾಶದಲ್ಲಿ ಸಂಚರಿಸುವರು.

೬೭. ತೊಂಗಲ್ = ರಾಶಿ, ಅಣಮಿಲ್ಲ = ಸ್ವಲವೂ ಇಲ್ಲ.

೬೮. ಚವುಕ = ಚೌಕ, ನಾಲ್ಕು ದಾರಿಗಳು ಸೇರುವಸ್ಥಳ, ಮಂದಿ = ಜನರು, ಮರುಳಪ್ಪಿನೆಗಂ = ಮಂಕಾಗುವಹಾಗೆ.

೬೯. ಪದ್ಯ ೪೦ ಕ್ಕೆ ಟಿಪ್ಪಣಿಯನ್ನು ನೋಡಿ.

೭೦. ಸೈಪು = ಪುಣ್ಯ.

೭೧. ೪೦ ನೆಯ ಪದ್ಯದ ಟಿಪ್ಪಣಿಯನ್ನು ನೋಡಿ.

೭೨. ಗುಂಜು = ಜಗ್ಗು, ಹಿಂಜು = ಬಿಡಿಸಿಕೊಳ್ಳುವುದು, ಪೀರ್ದ = ಹೀರಿ, (ಕುಡಿದ)

೭೩. ಮಲೆತ = ಎದುರಾಗಿನಿಂತ, ಆಜಿ = ಸೈನ್ಯ, ದಳ = ಸೈನ್ಯ, ತವೆ = ನಾಶವಾಗುವಹಾಗೆ, ಇದು ಯಾವ ಯಂತ್ರ ?

೭೪. ಠವಣಿಸು = ಲೆಕ್ಕಕ್ಕೆ ಸರಿಬರುವಹಾಗೆ ಪದ್ಯವನ್ನು ಹೇಳುವುದು. ಎಂದರೆ ಛಂದಸ್ಸಿಗೆ ಸರಿಯಾಗಿ ತಡೆಯಿಲ್ಲದೆ ಹೇಳುವುದು. ಕಮ್ಮಯಿಪ = ಇಂಪಾಗಿ ಹೇಳುವ.

ಕವಿಮಾರ್ಗದೊಳೊಖ್ಖಾಣಿಪ |
ಠವಣಿಪ ಕಮ್ಮೈಸುವೆಡೆಯೊಳೊಖ್ಖಾಣಿಸಲುಂ ||
ಠವಣಿಸಲುಂ ಕಮ್ಮೈಸಲು |
ವಿಮನಂತಾರ್ ಬಲ್ಲರೆನಿಸಿದಂ ಕವಿರತ್ನಂ || (Aj).

೭೫. ಪಳಂಚಲೆದು = ಮುಟ್ಟಹೊಡೆದು, ಬೆಸಕೆಯ್ದ = ಸೇವೆಮಾಡಿದ (ಚಾಕರಿಮಾಡಿದ) ಓಜೆನಡೆದ = ಸೊಗಸಿನಿಂದ ಕೂಡಿದ, ಆಳ್ವೆಸಂ = ಆಳುಗಳ ಆಳಿನಕೆಲಸ, (ಚಾಕರಿ).

೭೬. ಧರ್ಮಯುದ್ಧದಲ್ಲಿ ಗಿರಿಯೇರಿದವರನ್ನೂ, ನೀರಹೊಕ್ಕವರನ್ನೂ, ಆಯುಧವನ್ನು ಕೆಳಗಿಟ್ಟವರನ್ನೂ, ಬಾಯಲ್ಲಿ ಹುಲ್ಲು ಕಚ್ಚಿಕೊಂಡವರನ್ನೂ, ಬೆನ್ನನ್ನು ತೋರಿಸಿದವರನ್ನೂ ಕೊಲ್ಲುತ್ತಿರಲಿಲ್ಲ. ವಿಭೂತಿಯುಕ್ಕೆ = ಏನರ್ಥ ?

೭೭. ಪುದುಗಿದ್ದರ್ = ಅವಿತುಕೊಂಡಿದ್ದು.

೭೮. ತೀನ = ತೀಟೆ, ಸೊಕ್ಕು, ಅಱಗುಲಿ = ಕೊಲೆಯನ್ನು ಮಾಡುವವನು. ಪೋಂತ = ಹೋತ, ಸಂದಱಂ = ಪ್ರಸಿದ್ಧವಾದ ಧರ್ಮ, ಅಱಿಕೆಯ = ಹೆಸರುವಾಸಿಯುಳ್ಳ, ಮಿಱ್ತು = ಮೃತ್ಯು.

೭೯. ತಟಿದಂಗನೆ = ಮಿಂಚೆಂಬ ಹೆಂಗಸು, ಸಮಂತು = ಚೆನ್ನಾಗಿ, ಅಳವಡೆ = ಒದಗಲು, ಪಂಚಭೂತಗಳು = ಭೂಮಿ, ನೀರು, ತೇಜಸ್ಸು, ವಾಯು, ಆಕಾಶ, ಪೊಳೆಯೆ. ಹೀಗಿದ್ದರೆ ಜಗತ್ತಿಗೆ ಉಪಕಾರಮಾಡುವುದಕ್ಕೆ ವಿದ್ಯೆಗಳು ಬೇಕಲ್ಲದೆ ಆ ವಿದ್ಯೆಗಳನ್ನು ಜಗತ್ಸಂಹಾರಕ್ಕೆ ಮನುಷ್ಯರು ಬಯಸುವುದು ಸರಿಯಲ್ಲ.

೮೦. ದಱಿದುಱ = ಬಲ್ಲೂರೆ, ನೆತ್ತರಾಪೊಳೆ = ರಕ್ತದನದಿ, ಪೆರ್ದೊರೆ = ದೊಡ್ಡನದಿ, ಏಱ್ಕನೇಟಿನೊಳ್ = ಸಿಡಿಲಹೊಡೆತದಿಂದ, ಪೊಱಲ್ = ಪಟ್ಟಣ, ಪುರ, ಮೊಟ್ಟನಾಯ್ತು = ನೆಲಸಮನಾಯ್ತು, ಅಱಲ್ = ದುಃಖ.

೮೧. ಗಾಂಪ = ಮೂಢ, ಉಕ್ಕ್ರ = ಶೌರ್ಯ, ತುಱಿಲಾಳ್ = ಪಾದಸೇವೆಮಾಡುವವನು, ಆಳ್ದಂ = ಒಡೆಯ, ಯಜಮಾನ, ಕಳಿವನೇವಿರಿಯಂ = ಕಳಿವಂಥವನು ಎಂಥ ದೊಡ್ಡವನು ?

೮೨. ಆಟಿದೆ = ಆಶಿಪಡದೆ.

೮೩. ವೇಮನಾರಾಧ್ಯರು, (ಬೆಲಿದೇವಿಯವರು) ಇವರು ಜೋಹಾರೆಂದು ನಮಸ್ಕರಿಸಿದ ಅರಸುಮಗನನ್ನು ಹರಸದೆ ಇದ್ದರು. ಅದಕ್ಕವನು ಕೋಪಗೊಂಡು ನಿಮ್ಮ ಹರಟೆಯಿದ್ದರೆಷ್ಟು ಇಲ್ಲದಿದ್ದರೆಷ್ಟು, ಎಂದು ಹೇಳಿದನು. ಹಾವು ಕಚ್ಚಿ ನೀನು ನಾಳೆಯೊಳಗೆ ಸಾಯುವುದನ್ನು ತಿಳಿದು ನಾಳೆ ನಿನ್ನನ್ನು ಶರಣರು ಹರಸುವರಾದುದರಿಂದ ನನ್ನ ಬಾಯ್ಗೆ ಹರಕೆ ಬರಲಿಲ್ಲವೆಂದರು. ಸಾಯಿಸುವುದಕ್ಕೂ ಬದುಕಿಸುವುದಕ್ಕೂ ಮಲಹರನೊಬ್ಬನೇ ಕಾರಣನಲ್ಲದೆ ಮನುಷ್ಯರಾದವರೇನುಮಾಡಿಯಾರು ? ನಾಳೆ ಸತ್ತಮೇಲೆ ಬದುಕಿಸಿದರೆ ನೀವೇ ದಿಟವಾದ ಗುರುಗಳು—ಎಂದು ಹೇಳಿ ಮನೆಗೆ ಹೋದನು. ಆ ರಾತ್ರಿ ಮಲಗಿರುವಾಗ ಹಾವು ಬಂದೇ ಬಂತು. ಕಚ್ಚಿ ಕುಮಾರನು ಸತ್ತನು. ಮಾಂತ್ರಿಕರು ಬಂದು ಏನೇನುಮಾಡಿದರೂ ಬದುಕಿಸುವುದಕ್ಕಾಗದೆ ವೇಮನಾರ್ಯರ ಕಾಲಲ್ಲಿ ತಂದು ಹಾಕಿ ಮೊರೆಯಿಡಲು, ಕರುಣೆಹುಟ್ಟಿ ಬದುಕಿಸಿಕೊಟ್ಟು ಹರಸಿದರು. ಎದ್ದ ಮಗನಿಗೆ ಬುದ್ಧಿ ಬಂದು, ಶರಣಾಗತನಾದನು.

೮೪. ಏಳ್ಗೆ = ಅಭಿವೃದ್ಧಿ, ಪದವು = ವೈಭವ ಅವಗಂ = ಅಧಿಕವಾಗಿ, ವಿಶೇಷವಾಗಿ.

೮೫. ಜನ್ನಂ = ಯಜ್ಞ, ಶಿಕ್ಷಕರ್ = ಸಿಕ್ ಜನರೆಂದು ಪಂಜಾಬು ಪ್ರಾಂತದಲ್ಲಿರುವ ಬಲಿಷ್ಠರು, ಅಡಬಳ = ಮಾಂಸ.

೮೬. ಭವಭಯ = ಜನ್ಮದಭಯ ಎಂದರೆ ಸಂಸಾರದ, ಪರಾಭವ = ತಿರಸ್ಕಾರ, ಆಜನಂಜವ = ಸಂಸಾರ.

> ಜವನಟ್ಟೆ ತೊಲ್ವತೊಲೆಗಾ |
> ಜವಂ ಜವಸ್ಥಿತಿಗೆ ಮೆಯ್ಯನೀರ್ತೆಗೆವನ್ನಂ ||
> ಜವಜವ ಜವನಂಜಿಸಿದುವು |
> ಜವನಾಳ್ಗಳ ತೆಱದಿನೆನ್ನ ಕೆನ್ನೆಯ ನೆರೆಗಳ್ || (Aj).

೮೭. ಅಣುಗಂ = ಹುಡುಗ, ನೀಱ್ = ಹೆಂಗಸು, ನೀಱ = ಗಂಡಸು, ಪರಿಜು = ರೂಪ.

೯೦. ಏವ್ಮೆಸಿ = ಒಲ್ಲದೆ, ಅವಚಂ = ಜಿಹಾಸೆ.

೯೧. ಅಕ್ಕರಿಗರ್ = ವಿದ್ವಾಂಸರು, ಚೊಕ್ಕಳ = ಚೊಕ್ಕಟ, ನುಡಿವೆಣ್ = ಸರಸ್ವತಿ, ತವೆ = ವಿಶೇಷಾರ್ಥದ ಅವ್ಯಯ.

೯೨. ಕೈವೊಯ್ದು = ಕೈಯಮೇಲೆ ಹೊಡೆದು, ಪ್ರತಿಜ್ಞೆಮಾಡಿ, ಸೈತಿರೆ = ಚೆನ್ನಾಗಿರಲು, ಕಱುಂಬು = ಮತ್ಸರಿಸಿ, ಶಿಬಿ, ಶರಣಾಗತ ರಕ್ಷಕರಲ್ಲಿ ಪ್ರಸಿದ್ಧನಾದ ಪುರಾಣಪುರುಷನೀತನು.

೯೩. ಷಡಭಿಜ್ಞ = ಬುದ್ಧದೇವ, ಕೈವಾರ = ಕೈಯೆತ್ತಿ ಹೊಗಳುವುದು, ಕಾಡೊಡೆಯ = ಬೇಡರವರು, ಕೊಕ್ಕರಿಕ್ಕೆ = ಜುಗುಪ್ಸೆ.

೯೪. ಅತಿಚಾರ = ದುರಾಚಾರ, ಅವಚಱಿವೆ = ಹೇಸದೆ, ತೊಡರ್ಪು = ಕಟ್ಟು, ನಿರ್ಬಂಧ.

೯೫. ಇಂದಿನ ಕಲಾಕುಶಲರ್ = ಈ ಕಾಲದ ಶಾಸ್ತ್ರಜ್ಞರು, ಪರಿಣತರು = ಪಂಡಿತರು.

೯೮. ನಿಗ್ಗವಂ = ಗಜದಂತ.

೧೦೨. ಸೈಪುಕೈಪೆಗಳು = ಪುಣ್ಯಪಾಪಗಳು, ಉಕ್ಕೈವ = ಉತ್ಸವ.

ಸನ್ಮಾನ ಗ್ರಂಥಾವಳಿ.

ತೀಹಿತೈಷಿಣೀ ಗ್ರಂಥಮಾಲೆಯಲ್ಲಿ ಇತರರ ಗ್ರಂಥಗಳಿಗೆ ಅವಕಾಶವಿಲ್ಲದಿ ಇತರ ಗ್ರಂಥಕರ್ತರ ಪ್ರೋತ್ಸಾಹನಾರ್ಥವಾಗಿ ಕಾಳಯುಕ್ತ ಸಂ|| ದಿಂದ (1918 ನೆ ಅಕ್ಟೋಬರ್) "ಸನ್ಮಾನ ಗ್ರಂಥಾವಳಿ" ಎಂಬ ಹೆಸ ರೊಂದನ್ನು ಏರ್ಪಡಿಸಿ, ಅದರ ಪ್ರಥಮ ಪುಸ್ತಕವಾಗಿ ಆಶ್ವಯುಜದಲ್ಲಿ ಕಲ್ಯಾಣ" ವೆಂಬ ನಾಟಕವನ್ನೂ ಪುಷ್ಯದಲ್ಲಿ "ಪ್ರಜ್ಞಾಸ್ವಯಂವರ" ನಾಟಕವನ್ನೂ ಸಿದ್ಧಾರ್ಥಿ ಸಂ|| ದ ವೈಶಾಖದಲ್ಲಿ "ಗುರುದತ್ತರಾಯನ ಎಂಬ ಉತ್ತಮ ಕವಿತಾರಚನೆಯನ್ನೊಳಕೊಂಡ ನಾಟಕಗ್ರಂಥವನ್ನೂ ಪಡಿಸಲಾಯಿತಲ್ಲದೆ, ಇದೇ ಸಿದ್ಧಾರ್ಥಿ ಸಂ|| ಶ್ರಾವಣ-ಭಾದ್ರಪದಗಳಲ್ಲಿ ಈ ಳಿಯ 4–5 ನೆಯ ಪುಸ್ತಕಗಳಾಗಿ "ಗಿರಿಮಲ್ಲಿಕಾರ್ಜುನಶತಕ" ವೆಂಬ ಶಿವ ಜಿಮಾಪರವಾದ ಪದ್ಯಗ್ರಂಥ (ಟಿಪ್ಪಣಿಯೊಡನೆ) ವನ್ನೂ "ಅಜಮಿಳೋ ನ" ವೆಂಬ ಹರಿಭಜನ ಗ್ರಂಥವನ್ನೂ ಪ್ರಕಟಗೊಳಿಸಿಲಾಗಿದೆ.

ಇನ್ನು ದ್ವಿತೀಯವರ್ಷದಲ್ಲಿ ಒಂದು ಉತ್ತಮತರದ ಕಾದಂಬರಿಯೂ, ದಿವಂ ಗತ ಪ್ಪದಾಸರಿಂದ ವಿರಚಿತವಾದ ಭೀಮಪರಾಕ್ರಮ ವರ್ಣನವೆಂಬ ಯಕ್ಷ ಗ್ರಬಂಧವೂ, ಶ್ರೀ|| ಎಸ್. ಎ. ನರಹರಯ್ಯನವರಿಂದ ವಿರಚಿತವಾದ ಶಿವ ಲಾಮೃತವೆಂಬ ಉತ್ತಮತರದ ನಾಟಕಗ್ರಂಥವೂ, ವಿವೇಕೋದಯ-ಭಾಮಾಕ ಣಗಳೆಂಬ ರೂಪಕಗಳೂ ಪ್ರಕಟವಾಗುವುವು. ಪ್ರಾಯಶಃ ಈ ಪುಸ್ತಕಗಳೆಲ್ಲವೂ ಅಧಿಗ್ಯತೆಯುಳ್ಳವುಗಳೂ ವಿಸ್ತೃತಗ್ರಂಥಗಳೂ ಆಗಿರುವುದರಿಂದ ಅವುಗಳ ಬೆಲೆ —10—0, 0—12—0 ಹೀಗೆ ಬೀಳುವುವು. ಅಪೇಕ್ಷಕರು ಚಂದಾ ದಾಗಿ ಸುಲಭ ದರದಲ್ಲಿ ಪಡೆಯಬಹುದು.

ಈವರೆಗೆ ಪ್ರಕಟವಾಗಿರುವ ಪುಸ್ತಕಗಳ ಕ್ರಯ.

ತಪತೀಕಲ್ಯಾಣ 0–8–0, 2. ಪ್ರಜ್ಞಾಸ್ವಯಂವರ 0–8–0, 3. ಗುರು ದತ್ತನ ಚರಿತ್ರೆ 0–10–0, 4. ಗಿರಿಮಲ್ಲಿಕಾರ್ಜುನಶತಕಂ 0–7–0, 5. ಅಜ ಮಿಳಾಖ್ಯಾನ 0–7–0. ಅಪೇಕ್ಷಕರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳ ಬಹುದು.

ಕಾರ್ಯದರ್ಶಿ—ಸತೀಹಿತೈಷಿಣೀ ಮಾತೃಮಂದಿರಂ,

ನಂಜನಗೂಡು, (ಮೈಸೂರು ಡಿ||).

ಶ್ರೀಃ

ಸತೀಹಿತೈಷಿಣೀ.

ಈ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ, ಮುಂದೆ ಆಗುವುದರ... ಕಗಳೆಲ್ಲವೂ ಸ್ತ್ರೀಯರಿಗೆ ಅತ್ಯುಪಯುಕ್ತವಾದ ಅನೇಕ ವಿಚಾರಗಳನ್ನೂ... ವಿದ್ಯಾರ್ಥಿ ವಿದ್ಯಾರ್ಥಿನಿಯರ ನೈತಿಕಶಿಕ್ಷಣ, ಅಭ್ಯಾಸಗಳಿಗೆ ಅತ್ಯಂತ ಸಹಾ... ಗಿರುವುವೆಂಬುದನ್ನು ನಾವು ವಿವರಿಸಬೇಕಾಗಿಲ್ಲ. ಒಮ್ಮೆ ನೋಡಿದರೆ ಅದು... ಜನವು ತಾನಾಗಿ ತಿಳಿದುಬರುವುದು.

ಈವರೆಗೆ ಪ್ರಕಟವಾಗಿರುವ ಪುಸ್ತಕಗಳು.

ಸಂಖ್ಯೆ	ಹೆಸರು	ಮುದ್ರಣ	
೧.	ಸುಶೀಲೆ	(೨ ನೆ ಮುದ್ರಣ)	೦—
೨.	ನಭಾ ಭಾಗ I.	(೨ ನೆ ಮುದ್ರಣ)	೧—...
೩.	ವಿದ್ಯುಲ್ಲತಾ	(ಪ್ರಥಮಮುದ್ರಣ)	೦—೧...
೪.	ವಿರಾಗಿಣೀ (ನಭಾ ಭಾಗ II.)	,,	೧—...
೫.	ದಕ್ಷಕನ್ಯಾ	,,	೧—...
೬.	ಮಾತೃನಂದಿನಿ	,,	೧— ೪—
೭.	ರಮಾನಂದ	(೨ ನೆ ಮುದ್ರಣ)	೦—...
೮.	ವಿಕ್ರಮ	(ಪ್ರಥಮಮುದ್ರಣ)	೧-...
೯.	ಚಂದ್ರವದನಾ	,,	೦-...
೧೦.	ಪೂರ್ಣಕಲಾ	,,	೧-...
	ಭದ್ರಗೀತಾವಲಿ (ಮದುವೆಯಲ್ಲಿ ವಧೂವರರು ಹೇಳುವ ಹಾಡಿನ ಪುಸ್ತಕ)		೦—...

೧೧. ಆನಂದಮಯಿ, ೧೨. ಬ್ರಹ್ಮಚಾರಿಣಿ, ೧೩. ಮಣಿಮಾ... ಮೂರು ಪುಸ್ತಕಗಳೂ ಕ್ರಮವಾಗಿ ೧೯೧೯ ನೆ ಡಿಶಂಬರ್ ಮತ್ತು ೧೯... ವರಿ-ಫೆಬ್ರುವರಿ ತಿಂಗಳುಗಳಲ್ಲಿ ಪ್ರಕಟವಾಗುವುವು. ...ಾಡು.

ವಿಳಾಸ—ಕಾರ್ಯದರ್ಶಿ,

ಸತೀಹಿತೈಷಿಣೀ-ಮಾತೃಮಂದಿರಂ, ನಂ...

ದ್ದುದರಿಂದ
ಆಶ್ವಯುಜ
ರಿನ ಶಾಖೆ
" ತಪತೀ
ವೆಂಬ ನಾ
ಚರಿತ್ರೆ "
ಪ್ರಕಟ
ಗ್ರಂಥಾ
ಭಕ್ತಿ ವ
ಪಾಖ್ಯಾ

ಗತ ತಿಮ್ಮ
ಗಾನ ಫ

ಲ್ಯ
ಅಧಿಕಯೋ
ಬೆಲೆಯೂ
ದಾರರಾ

1.
ದತ್ತರಾ
ಮಿಳೋಪಾ
ಬಹುದು.